# ಕರ್ನಾಟಕ ಸರ್ಕಾರ

# ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

# 2009–2010ನೇ ಸಾಲಿನ ವಾರ್ಷಿಕ ವರದಿ

## ಮುನ್ನುಡಿ

ಕೈಗಾರಿಕೆಗಳ ಸ್ಥಾಪನೆಗೆ ಕರ್ನಾಟಕವು ಒಂದು ಉತ್ತಮ ಮತ್ತು ಸೂಕ್ತ ಸ್ಥಳ ಎಂದು ಹೆಸರುವಾಸಿಯಾಗಿದೆ. ರಾಜ್ಯವು ಹಲವಾರು ವರ್ಷಗಳಿಂದ ಬದಲಾವಣೆಯ ಅವಶ್ಯಕತೆಗಳಿಗೆ ತಕ್ಕಂತೆ ಪ್ರಗತಿಪರ ದೃಷ್ಟಿಕೋನವನ್ನು ಗಮನದಲ್ಲಿಟ್ಟುಕೊಂಡು ದೇಶದ ಅರ್ಥಿಕ ಹಾಗೂ ಕೈಗಾರಿಕಾ ಬೆಳವಣಿಗೆಗೆ ಒತ್ತು ನೀಡುತ್ತಿದೆ. ರಾಜ್ಯವು ದೊಡ್ಡ ಸಾರ್ವಜನಿಕ ಉದ್ದಿಮೆಗಳನ್ನು, ದೊಡ್ಡ ಖಾಸಗಿ ಸ್ವಾಮ್ಯದ ಕೈಗಾರಿಕೆಗಳನ್ನು ಹಾಗೂ ಬಹಳಷ್ಟು ಎಂಎಸ್ಎಂಇಗಳನ್ನು ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಕರ್ನಾಟಕವು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಇತರ ಮೌಲ್ಯಾಧಾರಿತ ಜ್ಞಾನವುಳ್ಳ ಕೈಗಾರಿಕಾ ವಲಯಗಳನ್ನು ಸ್ಥಾಪಿಸುತ್ತಿದ್ದು ಇದರಿಂದಾಗಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮುಂತಾದ ವಲಯಗಳಲ್ಲಿ ಸಂಶೋದನೆ ಅಭಿವೃದ್ಧಿ ಸೌಲಭ್ಯವನ್ನು ಹೊಂದುವಲ್ಲಿ ಸಮರ್ಥವಾಗಿದೆ. ಕರ್ನಾಟಕ ರಾಜ್ಯವು ಹಲವಾರು ವಂಶ ಪಾರಂಪರ್ಯ ಗುಡಿ ಕೈಗಾರಿಕೆಗಳನ್ನು ಕುಶಲ ಕೈಗಾರಿಕೆಗಳನ್ನು, ಹಾಗೂ ಅತಿ ಸಣ್ಣ ಉದ್ಯಮಗಳಾದಂತಹ ಕೈಮಗ್ಗ, ವಿದ್ಯುತ್‌ಮಗ್ಗ, ರೇಷ್ಮೆ ನೇಕಾರಿಕೆ, ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಹೊಂದಿದೆ.

ಇದರೊಂದಿಗೆ ರಾಜ್ಯವು ಜಾಗತಿಕ ಆರ್ಥಿಕ ಹಿನ್ನಡೆಯ ಕೆಟ್ಟ ಪರಿಣಾಮಗಳನ್ನು ಎದುರಿಸಲು ಹಲವಾರು ಉತ್ತೇಜನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಪ್ರಸ್ತುತ ಪರಿಸ್ಥಿತಿಯನ್ನು ಎದುರಿಸುವಲ್ಲಿ ರಾಜ್ಯವು ಕೆಲವು ತಾತ್ಕಾಲಿಕ ಸುಧಾರಣೆಗಳನ್ನು ರಿಯಾಯಿತಿಗಳನ್ನು ಕೈಗಾರಿಕಾ ಹಾಗೂ ಸೇವಾ ಕ್ಷೇತ್ರಗಳಲ್ಲಿ ಹಮ್ಮಿಕೊಂಡಿದೆ.

ಕರ್ನಾಟಕ ಸರ್ಕಾರವು **ಜಿಎಸ್‌ಡಿಪಿ** ಬೆಳವಣಿಗೆಯನ್ನು ಹೆಚ್ಚಿಸಲು, ಉತ್ಪಾದನಾ ವಲಯದ ಬಲವರ್ಧನೆಯಿಂದ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳ ಸೃಜನೆ ಮಾಡಿ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವುದಲ್ಲದೆ, ರಾಷ್ಟ್ರಿಯ ರಫ್ತನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ. ಈ ದಿಶೆಯಲ್ಲಿ ಹಲವಾರು ಸೃಜನಾತ್ಮಕ ಅಂದರೆ ಕೈಗಾರಿಕಾ ಪೆಸಿಲಿಟೇಶನ್ ಕಾಯಿದೆ, ಹೊಸ ಕೈಗಾರಿಕಾ ನೀತಿ 2009–14, ರಾಜ್ಯ ವಿಶೇಷ ಆರ್ಥಿಕ ವಲಯ ನೀತಿ 2009, ಸುವರ್ಣ ಕರ್ನಾಟಕ ಜವಳಿ ನೀತಿ ಹಾಗೂ ಕರ್ನಾಟಕ ರಾಜ್ಯ ಖನಿಜ ನೀತಿ ಮುಂತಾದವುಗಳನ್ನು ಅನುಷ್ಠಾನಕ್ಕೆ ತಂದಿದೆ.

## ಕರ್ನಾಟಕ ಕೈಗಾರಿಕಾ ನೀತಿ 2009–14ರ ಪ್ರಮುಖ ಧ್ಯೇಯಗಳು ಈ ರೀತಿ ಇವೆ.

1. ಸದೃಡವಾದ ಕೈಗಾರಿಕಾ ಬೆಳವಣಿಗೆಗೆ ಬೇಕಾದ ಅನುಕೂಲಕರ ವಾತಾವರಣವನ್ನು ಕಲ್ಪಿಸುವುದು.
2. ರಾಜ್ಯದಲ್ಲಿ ಕೈಗಾರಿಕೆಗಳ ಸಮಗ್ರ ಅಭಿವೃದ್ಧಿ

3. 2014 ರೊಳಗಾಗಿ 10.00 ಲಕ್ಷ ಉದ್ಯೋಗಗಳ ಹೆಚ್ಚುವರಿ ಸೃಷ್ಟಿ

4. ರಾಜ್ಯದ ಒಟ್ಟು ಜಿಡಿಪಿಯ ಉತ್ಪಾದನಾ ವಲಯದ ಪಾಲನ್ನು ಶೇಕಡ 17 ರಿಂದ ಶೇ. 20ಕ್ಕೆ ಕೈಗಾರಿಕಾ ನೀತಿಯ ಅವಧಿಯಲ್ಲಿ ಹೆಚ್ಚಿಸುವುದು.

ಈ ಮೇಲಿನ ಧ್ಯೇಯಗಳನ್ನು ಕಾರ್ಯಗತಗೊಳಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜಿಸಿದೆ.

1. ಡಾ. ಡಿ. ಎಮ್. ನಂಜುಂಡಪ್ಪರವರ ಸಮಿತಿಯ ವರದಿಯಂತೆ ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸಲು ತಾಲ್ಲೂಕುಗಳನ್ನು, ಹಿಂದುಳಿಕೆ ಸ್ಥಿತಿಯ ಆಧಾರದ ಮೇಲೆ ನಾಲ್ಕು ವಲಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ.
2. ಅಂತರಾಷ್ಟ್ರೀಯ ಮಟ್ಟದ ಮೂಲಭೂತ ಸೌಕರ್ಯಗಳನ್ನು ನೀಡಲು ಸರ್ಕಾರಿ ಮತ್ತು ಖಾಸಗಿ ಪಾಲುದಾರಿಕೆಯನ್ನು ಉತ್ತೇಜಿಸುವುದು.
3. ರಾಜ್ಯದಾದ್ಯಂತ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ (ಎಸ್.ಕೆ.ಡಿ.ಪಿ) ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು ಹಾಗೂ ಕಾರಿಡಾರ್‌ನ ಉದ್ದಕ್ಕೂ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು.
4. ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಂಡು ಕೈಗಾರಿಕಾ ವಲಯಗಳನ್ನು ಅಭಿವೃದ್ಧಿಪಡಿಸಿ ಆ ಸ್ಥಳದ ಜನರು ಪಟ್ಟಣಕ್ಕೆ ವಲಸೆ ಹೋಗುವುದನ್ನು ಕಡಿಮೆ ಮಾಡುವುದು.
5. ಸಮಗ್ರ ಬೆಳವಣಿಗೆಗೆ ಭೂಸ್ವಾಧೀನ ಪ್ರಕ್ರಿಯೆಯನ್ನು ಸರಳೀಕರಿಸುವುದು.
6. ರೈತರ ಮತ್ತು ಬಂಡವಾಳ ಹೂಡಿಕೆದಾರರ ಸಾಮಾಜಿಕ ಹಾಗೂ ಆರ್ಥಿಕ ಹಿತಾಸಕ್ತಿಯನ್ನು ಭೂಸ್ವಾಧೀನಗೊಳಿಸಿಕೊಳ್ಳುವಾಗ ಕಾಯ್ದುಕೊಳ್ಳುವುದು.
7. ಅತೀ ಸಣ್ಣ, ಸಣ್ಣ ಹಾಗೂ ಮಧ್ಯಮ ವಲಯದ ಕೈಗಾರಿಕೆಗಳಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಿ ಅಂತರ್‌ರಾಷ್ಟ್ರೀಯಮಟ್ಟದ ಪೈಪೋಟಿಯನ್ನು ಎದುರಿಸುವಂತಹ ಸಾಮರ್ಥ್ಯ ನೀಡುವುದು.
8. ಕೈಗಾರಿಕಾ ನಿರ್ವಹಣೆಗೆ ಸಂಬಂಧಪಟ್ಟಂತೆ ಉತ್ತಮ ರಿಯಾಯಿತಿ ಮತ್ತು ಸೌಲಭ್ಯಗಳನ್ನು ನೀಡಿ ಅತೀ ಹಿಂದುಳಿದ ಪ್ರದೇಶದಲ್ಲಿ ಬಂಡವಾಳ ಹೂಡಿಕೆಯಾಗುವಂತೆ ಮಾಡಿ ಉದ್ಯೋಗ ಸೃಜನೆಯೊಂದಿಗೆ ಎಂಎಸ್‌ಎಂಇ ವಲಯಕ್ಕೆ ಪ್ರಾಮುಖ್ಯತೆ ನೀಡುವುದು.

## 1. ಬಂಡವಾಳ ಹೂಡಿಕೆಗೆ ಅನುಮೋದನೆ:

### ಎ) ಮೆಗಾ ಯೋಜನೆಗಳು :

ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯ ಉನ್ನತಮಟ್ಟದ ಅನುಮೋದನಾ ಸಮಿತಿಯು ಅಧ್ಯಕ್ಷರಾಗಿರುತ್ತಾರೆ. ರೂ. 50.00 ಕೋಟಿಗಳಿಗಿಂತ ಹೆಚ್ಚಿನ ಬಂಡವಾಳ ಹೂಡಿಕೆಯ ಯೋಜನೆಗಳಿಗೆ

ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿಯಿಂದ ಅನುಮೋದನೆ ನೀಡಲಾಗುತ್ತದೆ. 2009–10ನೇ ಸಾಲಿನಲ್ಲಿ ಒಟ್ಟು 110 ಘಟಕಗಳಿಗೆ ರೂ. 2,84,548.52 ಕೋಟಿ ಬಂಡವಾಳ ಹೂಡಿಕೆಯೊಂದಿಗೆ 2,84,934 ಲಕ್ಷ ಜನರಿಗೆ ಹೊಸ ಉದ್ಯೋಗ ಸೃಷ್ಟಿ ಮಾಡುವ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

## ಬಿ) ಸಣ್ಣ, ಮಧ್ಯಮ ಹಾಗೂ ಬೃಹತ್ ಯೋಜನೆಗಳು :

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ರಾಜ್ಯಮಟ್ಟದ ಏಕ ಗವಾಕ್ಷಿ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ರೂ. 3.00 ಕೋಟಿಯಿಂದ ರೂ. 50.00 ಕೋಟಿವರೆಗಿನ ಬಂಡವಾಳ ಹೂಡಿಕೆಯ ಯೋಜನೆಗಳಿಗೆ ಈ ಸಮಿತಿಯು ಅನುಮೋದನೆ ನೀಡುತ್ತದೆ. 2009–10ನೇ ಸಾಲಿನಲ್ಲಿ 363 ಸಂಖ್ಯೆಯ ಘಟಕಗಳಿಗೆ ರೂ. 7,836.74 ಕೋಟಿ ಬಂಡವಾಳ ಹೂಡಿಕೆಯ, 11,68,39 ಹೊಸ ಉದ್ಯೋಗ ಸೃಷ್ಟಿ ಮಾಡುವ ಯೋಜನೆಗಳಿಗೆ ಅನುಮೋದನೆ ನೀಡಿದೆ. ಇದರಲ್ಲಿ ಇಂಜಿನಿಯರಿಂಗ್, ಸಾಫ್ಟ್ ವೇರ್ ಪಾರ್ಕ್ ಹೋಟೆಲ್/ ಪ್ರವಾಸೋದ್ಯಮಗಳು, ಡ್ರಗ್ಸ್ / ಕೆಮಿಕಲ್ಸ್, ಆಹಾರ ಸಂಸ್ಕರಣ ಯೋಜನೆಗಳು ಪ್ರಮುಖವಾಗಿರುತ್ತವೆ.

ರಾಜ್ಯದಲ್ಲಿ ಬಂಡವಾಳ ಹೂಡಿಕೆಯ ಅನುಮೋದನೆಯು ಕೆಳಕಂಡಂತಿದೆ:




- ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿಯಿಂದ ಅನುಮೋದಿಸಲ್ಪಟ್ಟ ಕೈಗಾರಿಕಾ ಘಟಕಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂದ –1–ರಲ್ಲಿ ನೀಡಲಾಗಿದೆ.
- ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿಯಿಂದ ವರ್ಗವಾರು ಹಾಗೂ ಉತ್ಪನ್ನವಾರು ಅನುಮೋದಿಸಲ್ಪಟ್ಟ ಕೈಗಾರಿಕಾ ಘಟಕಗಳ ಮಾಹಿತಿಯನ್ನು ಅನುಬಂದ–2–ರಲ್ಲಿ ನೀಡಲಾಗಿದೆ.
- ರಾಜ್ಯ ಉನ್ನತ ಮಟ್ಟದ ತೀರುವಳಿ ಸಭೆಯಲ್ಲಿ ಅನುಮೋದನೆಗೊಂಡ ವಲಯವಾರು ಕೈಗಾರಿಕಾ ಘಟಕಗಳ ಮಾಹಿತಿಯನ್ನು ಅನುಬಂದ–3–ರಲ್ಲಿ ನೀಡಲಾಗಿದೆ.

- ರಾಜ್ಯ ಉನ್ನತ ಮಟ್ಟದ ತೀರುವಳಿ ಸಭೆಯಲ್ಲಿ ಅನುಮೋದನೆಗೊಂಡ ಜಿಲ್ಲಾವಾರು ಕೈಗಾರಿಕಾ ಘಟಕಗಳ ಮಾಹಿತಿಯನ್ನು ಅನುಬಂಧ–4–ರಲ್ಲಿ ನೀಡಲಾಗಿದೆ.

### ಸಿ) ಎಂ.ಎಸ್.ಎಂ.ಇ. ಘಟಕಗಳ ಭಾಗ – II ಸ್ವೀಕೃತಿ ಬಗ್ಗೆ:–

ಎಂ.ಎಸ್.ಎಂ.ಇ. ಘಟಕಗಳ ಭಾಗ II ನೋಂದಣಿ ಪತ್ರ ನೀಡಲು 17,278 ಘಟಕಗಳ ವಾರ್ಷಿಕ ಗುರಿ ನೀಡಲಾಗಿದೆ. 31.03.2010 ರವರೆವಿಗೆ 17,195 ಘಟಕಗಳಿಗೆ ಎಂ.ಎಸ್.ಎಂ.ಇ. ಘಟಕಗಳ ಭಾಗ II ನೊಂದಣಿ ಪತ್ರಗಳನ್ನು ನೀಡಲಾಗಿದೆ. ಈ ಘಟಕಗಳಲ್ಲಿ ರೂ. 1,22,816 ಲಕ್ಷಗಳ ಬಂಡವಾಳ ಹೂಡಿಕೆಯಾಗಿ 1,11,164 ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ಉದ್ಯಮಶೀಲರು ಸ್ಥಾಪಿಸಿರುವ 2,503 ಘಟಕಗಳು ಪರಿಶಿಷ್ಟ ಪಂಗಡ ಜಾತಿಯ ಉದ್ಯಮಶೀಲರು ಸ್ಥಾಪಿಸಿರುವ 961 ಘಟಕಗಳು ಅಲ್ಪಸಂಖ್ಯಾತರ ಉದ್ಯಮಶೀಲರು ಸ್ಥಾಪಸಿರುವ 1,532 ಘಟಕಗಳು ಅಂಗವಿಕಲರು/ ಮಾಜಿಸೈನಿಕ ಉದ್ಯಮಶೀಲರು ಸ್ಥಾಪಿಸಿರುವ 45 ಘಟಕಗಳು ಮಹಿಳಾ ಉದ್ಯಮಶೀಲರು ಸ್ಥಾಪಿಸಿರುವ 4,842 ಘಟಕಗಳು ಸೇರಿವೆ.

- ಜಿಲ್ಲಾವಾರು ಐ.ಇ.ಎ.ಎಮ್. ಭಾಗ–1–ರ ಮಾಹಿತಿಯನ್ನು ಅನುಬಂದ–5–ರಲ್ಲಿ ನೀಡಲಾಗಿದೆ.
- ಅತಿ ಸಣ್ಣ, ಸಣ್ಣ ಮತ್ತು ಮದ್ಯಮ ಘಟಕಗಳ ಭಾಗ **II** ರ ವಿವರಗಳನ್ನು ಅನುಬಂಧ–6–ರಲ್ಲಿ ನೀಡಲಾಗಿದೆ.

### ಡಿ) ಬೃಹತ್ ಮತ್ತು ಮೆಗಾ ಘಟಕಗಳು:

ರಾಜ್ಯದಲ್ಲಿ 31–3–2010 ರವರೆಗೆ ಒಟ್ಟು 826 ಬೃಹತ್ ಮತ್ತು ಮೆಗಾ ಕೈಗಾರಿಕಾ ಘಟಕಗಳು ರೂ. 8,04,341.93 ಕೋಟಿಗಳೊಂದಿಗೆ ಸ್ಥಾಪಿಸಲ್ಪಟ್ಟಿದ್ದು 3,80,180 ಜನರಿಗೆ ಉದ್ಯೋಗಾವಕಾಶ ಸೃಷ್ಟಿಸಿದೆ.

## 2. ಕೈಗಾರಿಕಾ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಚಟುವಟಿಕೆಗಳು:

### ಎ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ:

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಾಯಿದೆ 1966 ರ ಪ್ರಕಾರ ಶಾಸನಬದ್ಧವಾಗಿ ಸ್ಥಾಪಿತಗೊಂಡಿದೆ. ಈ ಸಂಸ್ಥೆಯ ಉದ್ದೇಶವು ಭೂಮಿಯನ್ನು ಸ್ವಾದೀನಪಡಿಸಿಕೊಂಡು ಕೈಗಾರಿಕಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಕೈಗಾರಿಕಾ ಪ್ರದೇಶವಾಗಿ ಅಭಿವೃದ್ಧಿಪಡಿಸುವುದಾಗಿರುತ್ತದೆ. ಈ ಮಂಡಳಿಯು ಅಸ್ತಿತ್ವದ ದಿನಾಂಕದಿಂದ ಮಾರ್ಚ್ 2010ರ ಅಂತ್ಯದವರೆಗೆ 87,000 ಎಕರೆಯಷ್ಟು ಭೂಮಿಯನ್ನು ಹಲವಾರು ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿದೆ.

ದಿನಾಂಕ 1–4–2009 ರಿಂದ 31–3–2010ರ ವರೆಗೆ ಮಂಡಳಿಯು 2,492 ಎಕರೆಯಷ್ಟು ಭೂಮಿಯನ್ನು ಕೈಗಾರಿಕಾ ಪ್ರದೇಶಕ್ಕೆ ಹಾಗೂ ಏಕ ಘಟಕ ಸಂಕಿರಣಗಳಿಗಾಗಿ ಸ್ವಾದೀನಪಡಿಸಿಕೊಂಡಿದೆ.

1) ಕೈಗಾರಿಕಾ ಪ್ರದೇಶ 1442 ಎಕರೆ
2) ಏಕ ಗವಾಕ್ಷಿ ಘಟಕ ಸಂಕೀರ್ಣ 1050 ಎಕರೆ

2009-10ನೇ ಸಾಲಿನಲ್ಲಿ ಮಂಡಳಿಯು ಭೂ ಪರಿಹಾರಕ್ಕಾಗಿ ರೂ. 1050.00 ಕೋಟಿ ಮತ್ತು ಕೈಗಾರಿಕಾ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ. 150.00 ಕೋಟಿ ವೆಚ್ಚ ಮಾಡಿದೆ.

ಪ್ರಸಕ್ತ ಸಾಲಿನಲ್ಲಿ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ 990 ಘಟಕಗಳಿಗೆ 1442 ಎಕರೆಯಷ್ಟು ಭೂಮಿಯನ್ನು ಹಂಚಿಕೆ ಮಾಡಲಾಗಿದೆ.

ಕೆಐಎಡಿಬಿಯು ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಯೋಜನೆಯ ಅನುಷ್ಠಾನವನ್ನು ಕೂಡ ಹಮ್ಮಿಕೊಂಡಿದೆ. ಈ ಯೋಜನೆಗಾಗಿ 35,272 ಎಕರೆಗಳಷ್ಟು ಭೂಮಿಯನ್ನು ಗುರುತಿಲಾಗಿದೆ ಹಾಗೂ ಮೆ. ಫೀಡ್‌ಬ್ಯಾಕ್ ವೆಂಚರ್ಸ್ ಪ್ರೈವೆಟ್ ಲಿಮಿಟೆಡ್ ರವರನ್ನು ಯೋಜನಾ ನಿರ್ವಹಣಾ ಕನ್ಸಲ್‌ಟೆಂಟ್ ಆಯ್ಕೆ ಮಾಡಿಕ್ಕೊಳ್ಳಲಾಗಿದೆ.

## ಲ್ಯಾಂಡ್ ಬ್ಯಾಂಕ್ ಯೋಜನೆ:

ಕರ್ನಾಟಕ ಸರ್ಕಾರವು 2010 ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಲು ಉದ್ದೇಶಿಸಿದೆ. ಕೈಗಾರಿಕೋದ್ಯಮಿಗಳಿಗೆ ಅವಶ್ಯಕತೆ ಇರುವ ಕೈಗಾರಿಕಾ ಭೂಮಿಯನ್ನು ತ್ವರಿತವಾಗಿ ನೀಡಲು ಭೂಮಿ ಬ್ಯಾಂಕ್‌ನ್ನು ಸಿದ್ಧಪಡಿಸಲಾಗುತ್ತಿದೆ. ಇದರಿಂದ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ಭೂಮಿ ಲಭ್ಯತೆ ಇಲ್ಲದೆ ನೆರೆ ರಾಜ್ಯಗಳಿಗೆ ವಲಸೆ ಹೋಗುವುದನ್ನು ತಪ್ಪಸಿದಂತಾಗುವುದು. ಲ್ಯಾಂಡ್ ಬ್ಯಾಂಕ್‌ನ ವಿವರಗಳು ಕೆಳಕಂಡಂತಿದೆ.

**ವಿಸ್ತೀರ್ಣ: ಎಕರೆಗಳಲ್ಲಿ**

| ಕ್ರಮ ಸಂಖ್ಯೆ | ವಿವರ | ಸರ್ಕಾರದ ಭೂಮಿ | ಖಾಸಗಿ ಭೂಮಿ | ಒಟ್ಟು |
|---|---|---|---|---|
| 1 | ಪ್ರಾಥಮಿಕ ಅಧಿಸೂಚನೆ ನೀಡಿರುವುದು | 11,986-25 | 34,747-18 | 46,734-03 |
| 2 | ಅಂತಿಮ ಅಧಿಸೂಚನೆ ನೀಡಿರುವುದು. | 123-29 | 12,255-25 | 12,379-14 |
| 3 | ಪ್ರಾಥಮಿಕ ಅಧಿಸೂಚನೆ ನೀಡ ಬೇಕಾಗಿರುವುದು. | 1,745-00 | 40,002-03 | 41,747-38 |
| | **ಒಟ್ಟು** | **13,856-09** | **87,005-06** | **10,861-15** |

## ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ:

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು 3 ಮತ್ತು 4 ನೇ ಜೂನ್, 2010 ರಂದು ಬೆಂಗಳೂರಿನಲ್ಲಿ ನಡೆಸಲು ಯೋಜಿಸಲಾಗಿದೆ. ಎರಡು ದಿನಗಳ ಸಮಾವೇಶವು ಸಮ್ಮೇಳನ, ವಸ್ತು ಪ್ರದರ್ಶನ, ವ್ಯಾಪರ ಸಭೆಗಳನ್ನು ಒಳಗೊಂಡಿರುತ್ತದೆ. ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದ ಕರ್ಟನ್ ರೈಸರ್ ಕಾರ್ಯಕ್ರಮವನ್ನು 16.9.2009 ರಂದು ನಡೆಸಲಾಯಿತು. ಅದೇ ದಿನ ಲಾಂಛನವನ್ನು ಬಿಡುಗಡೆ ಮಾಡಿ, ಅಂತರ್ಜಾಲ ತಾಣವನ್ನು ಪ್ರಾರಂಭಿಸಲಾಯಿತು.

ಕರ್ನಾಟಕ ಸರ್ಕಾರ CII ಹಾಗೂ FICCI ಸಂಸ್ಥೆಗಳು ಈ ಸಮಾವೇಶದಲ್ಲಿ ಸಹ ಪಾಲುದಾರರಾಗಿರುತ್ತಾರೆ.

ಈಗಾಗಲೇ ವಿದೇಶಿ ಬಂಡವಾಳ ಆಕರ್ಷಣೆಗೆ ಅಮೇರಿಕಾ, ಸ್ವೀಡನ್, ಚೀನಾ ಹಾಗೂ ಜಪಾನ್ ದೇಶಗಳಲ್ಲಿ ರೋಡ್‌ಶೋಗಳನ್ನು ನಡೆಸಿದೆ. ಯುಎಇ, ಸಿಂಗಾಪುರ, ಮಲೇಶಿಯಾ, ಹಾಂಕಾಂಗ್ ಮತ್ತು ಇತರೆ ದೇಶಗಳಲ್ಲಿಯೂ ಸಹ ನಡೆಸಲು ಉದ್ದೇಶಿಸಲಾಗಿದೆ.

ಹಾಗೆಯೇ, ಕಲ್ಕತ್ತಾ, ದೆಹಲಿ, ಮುಂಬೈ, ಹೈದರಾಬಾದ್ ಮತ್ತು ಚೆನ್ನೈ ನಗರಗಳಲ್ಲಿ ರೋಡ್ ಶೋಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಈಗಾಗಲೇ, ನವದೆಹಲಿಯಲ್ಲಿ ಎರಡು ಶೋಗಳನ್ನು (ಉದ್ದಿಮೆದಾರರಿಗೆ ಒಂದು ಕಾರ್ಯಕ್ರಮ ಮತ್ತು ವಿವಿಧ ದೇಶದ ರಾಯಭಾರಿಗಳಿಗಾಗಿ ಇನ್ನೊಂದು ಕಾರ್ಯಕ್ರಮವನ್ನು) ದಿನಾಂಕ 29.01.2010ರಂದು, ಯಶಸ್ವಿಯಾಗಿ ನಡೆಸಲಾಯಿತು.

ಮೆ. JWT Consortium ನ್ನು Knowledge Partner/Media Consultancy/ Event Management ಗಳಿಗೆ ಸಲಹೆಗಾರರಾಗಿ ನೇಮಿಸಲಾಗಿದೆ.

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದ ವಿವರಗಳನ್ನು ಮತ್ತು ನೊಂದಣಿ ಅರ್ಜಿಯನ್ನು www.advantagekarnataka.com ನಲ್ಲಿ ಪಡೆಯಬಹುದಾಗಿದೆ.

ಸಮಾವೇಶವನ್ನು ಯಶಸ್ವಿಯಾಗಿ ನಡೆಸಲು ವಿವಿಧ ಕಾರ್ಯಪಡೆಗಳನ್ನು ಸರ್ಕಾರಿ ಆದೇಶ ಸಂಖ್ಯೆ. ಸಿಐ 192 ಸಿಪಿಐ 2009, ದಿನಾಂಕ 6-8-2009 ಮತ್ತು ಆದೇಶ ಸಂಖ್ಯೆ ಐಟಿಡಿ 60 ಎಡಿಎಮ್ 2009 ದಿನಾಂಕ 16.9.2009 ರಲ್ಲಿ ಕೆಳಕಂಡಂತೆ ರಚಿಸಲಾಗಿದೆ.

ಈ ಕೆಳಕಂಡಂತೆ 5 ಕಾರ್ಯಪಡೆಗಳನ್ನು ಸಮಾವೇಶ, ವಸ್ತು ಪ್ರದರ್ಶನ, ಸಮ್ಮೇಳನ ಸಭೆಗಳು ಇತ್ಯಾದಿಗಳ ಸಮನ್ವಯ ಮತ್ತು ಮೇಲ್ವಿಚಾರಣೆಗಾಗಿ ಮಾನ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ.

- ಸ್ವಾಗತ ಕಾರ್ಯಪಡೆ – ಮಾನ್ಯ ಸಚಿವರು, ಸಾರಿಗೆ ಇಲಾಖೆ ಹಾಗೂ ಬೆಂಗಳೂರು ನಗರದ ಜಿಲ್ಲೆಯ ಉಸ್ತುವಾರಿ ಸಚಿವರು
- ಪ್ರಚಾರ ಕಾರ್ಯಪಡೆ – ಮಾನ್ಯ ಸಚಿವರು ವಾರ್ತಾ ಇಲಾಖೆ, ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಹಾಗೂ ಐ.ಟಿ ಮತ್ತು ಬಿ.ಟಿ ಇಲಾಖೆ
- ಮಾರುಕಟ್ಟೆ ಕಾರ್ಯಪಡೆ (ಬಂಡವಾಳ ಉತ್ತೇಜನ) – ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು
- ಕಾರ್ಯಕ್ರಮದ ನಿರ್ವಹಣಾ ಕಾರ್ಯಪಡೆ – ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು
- ಐ.ಟಿ ಮತ್ತು ಬಿ.ಟಿ ಬಂಡವಾಳ ಉತ್ತೇಜನ ಕಾರ್ಯಪಡೆ – ಮನ್ಯ ಸಚಿವರು ವಾರ್ತಾ ಇಲಾಖೆ, ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಹಾಗೂ ಐ.ಟಿ ೇತ್ತು ಬಿ.ಟಿ ಇಲಾಖೆ

ವಲಯವಾರು ಕಾರ್ಯಪಡೆಗಳನ್ನು ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಸಮನ್ವಯಕ್ಕಾಗಿ ರಚಿಸಲಾಗಿದೆ. ಸಮ್ಮೇಳನದ ವಿಷಯಗಳು ಕೆಳಕಂಡಂತಿವೆ.

1. ಮೂಲಭೂತ ಸೌಕರ್ಯ
2. ಸೂಕ್ಷ್ಮ ಮತ್ತು ಸಣ್ಣ ಉದ್ಯಮ ವಲಯ
3. ಶಿಕ್ಷಣ
4. ಪ್ರವಾಸೋದ್ಯಮ
5. ಜವಳಿ
6. ಅಟೋಮೊಬೈಲ್ ಮತ್ತು ಎರೋಸ್ಪೇಸ್
7. ಐ.ಟಿ ಮತ್ತು ಬಿ.ಟಿ
8. ವಿದ್ಯುತ್
9. ಆರೋಗ್ಯ
10. ಉಕ್ಕು ಮತ್ತು ಕಬ್ಬಿಣ
11. ಸಿಮೆಂಟ್ ವಲಯ
12. ಆಹಾರ ಸಂಸ್ಕರಣೆ

ಮಾದ್ಯಮ ಸಲಹೆಗಾರರಿಂದ (Media Consultant) ಕರಡು ಮಾದ್ಯಮ ಯೋಜನೆಯನ್ನು ತಯಾರಿಸಲಾಗಿದೆ.

Event Management Consultant ರವರಿಂದ ಸಮಾವೇಶ/ಸಮ್ಮೇಳನಗಳ ಸಭಾಂಗಣಗಳು, ವಸ್ತು ಪ್ರದರ್ಶನ ಕ್ಷೇತ್ರ, ಸಭಾ ಕೊಠಡಿಗಳು ಇತ್ಯಾದಿಗಳ ಕರಡು ವಿನ್ಯಾಸ ಮತ್ತು ನಕಾಶೆಗಳನ್ನು

ತಯಾರಿಸಲಾಗಿದೆ. ಟೆಕ್ಸಾಕ್ ಸಂಸ್ಥೆಗೆ ಅಗತ್ಯವಾದ ಸರಕು ಸಾಗಣೆ ಸೇವೆಯ ಸರಬರಾಜುದಾರರ ಆಯ್ಕೆ ಕಾರ್ಯದ ಜವಾಬ್ದಾರಿಯನ್ನು ವಹಿಸಲಾಗಿದೆ.

ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಪೂರಕವಾಗಿ, ವಿವಿಧ ವಲಯಗಳ ಮುಖ್ಯಸ್ಥರು, ಪ್ರಮುಖ ಉದ್ದಿಮೆದಾರರೊಂದಿಗೆ ವಿಚಾರ ವಿನಿಮಯ ಸಭೆಗಳು ನಡೆಸಲಾಗುತ್ತಿದೆ:

- ಬೆಂಗಳೂರಿನ ಪ್ರಮುಖ ಕೈಗಾರಿಕಾ ಸಂಘ ಸಂಸ್ಥೆಗಳ ಮುಖ್ಯಸ್ಥರುಗಳ ಸಭೆಯನ್ನು ದಿನಾಂಕ 5.1.2010 ರಂದು ನಡೆಸಲಾಯಿತು.
- ಬೆಂಗಳೂರಿನ ಪ್ರಮುಖ ಕಟ್ಟಡ ಉದ್ದಿಮೆದಾರರ ಮತ್ತು ಡೆವಲಪರ್ಸ್ ಮುಖ್ಯಸ್ಥರ ಸಭೆಯನ್ನು ದಿನಾಂಕ 6.1.2010 ರಂದು ನಡೆಸಲಾಯಿತು.
- ಬೆಂಗಳೂರಿನ ಪ್ರಮುಖ ಬ್ಯಾಂಕ್ ಉದ್ಯಮಿಗಳ ಮುಖ್ಯಸ್ಥರ ಮತ್ತು ಹಿರಿಯ ಅಧಿಕಾರಿಗಳ ಸಭೆಯನ್ನು ದಿನಾಂಕ 7.1.2010 ರಂದು ನಡೆಸಲಾಯಿತು.
- FICCI ಮತ್ತು MOIA ಇಲಾಖೆ ಸಹಭಾಗಿತ್ವದೊಂದಿಗೆ ಇಂಡೋ ಅರಬ್ ಬಂಡವಾಳ ಹೂಡಿಕೆ ಸಮಾವೇಶವನ್ನು ದೆಹಲಿಯಲ್ಲಿ 8-9ನೇ ಫೆಬ್ರವರಿ 2010 ರಂದು ನಡೆಸಲಾಯಿತು. ಇದರಲ್ಲಿ ಕರ್ನಾಟಕ ಸರ್ಕಾರ ಸಕ್ರಿಯವಾಗಿ ಭಾಗವಹಿಸಿ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ ಪೂರ್ಣ ಮಾಹಿತಿಯನ್ನು ಒದಗಿಸಿತು.
- ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಪೂರಕವಾಗಿ "ಟ್ರೇಡ್ ಕಮಿಷನರ್ ಮತ್ತು ಫಾರಿನ್ ಟ್ರೇಡ್ ಆಫೀಸರ್ಸ್" ಗಳ ಸಭೆಯನ್ನು ದಿನಾಂಕ 25.2.2010 ರಂದು ನಡೆಸಲಾಯಿತು.
- ಮೇಲ್ಕಂಡ ಸಭೆಗಳಲ್ಲಿ ಸರ್ಕಾರದ ಅಧಿಕಾರಿಗಳು ಭಾಗವಹಿಸಿ ಬಂಡವಾಳ ಹೂಡಿಕೆದಾರರಿಗೆ ರಾಜ್ಯದಲ್ಲಿ ಬಂಡವಾಳ ಹೂಡಲು ಸಾಧ್ಯತೆ ಇರುವ ವಲಯಗಳ ಬಗ್ಗೆ ಜಾಗೃತಿ, ಬಂಡವಾಳ ಹೂಡಿಕೆ ಸಮಾವೇಶದ ಬಗ್ಗೆ ಅರಿವು ಮೂಡಿಸಲಾಯಿತು.

## ಬಿ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ:

ನಿಗಮವು ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಒಂದು ಪ್ರಮುಖ ಸಂಸ್ಥೆಯಾಗಿದೆ. ಕೈಗಾರಿಕಾ ವಸಾಹತುವನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಿ, ಕೈಗಾರಿಕಾ ಷೆಡ್ಡುಗಳನ್ನು ನಿರ್ಮಾಣ ಮಾಡಿ ಕೈಗಾರಿಕೋದ್ಯೋಮಿಗಳಿಗೆ ಹಂಚಿಕೆ ಮಾಡುವುದು, ನಿಗಮದ ಪ್ರಮುಖ ಕೆಲಸವಾಗಿದೆ. ಇಲ್ಲಿಯವರೆಗೆ ರಾಜ್ಯದಲ್ಲಿ 160 ಕೈಗಾರಿಕಾ ವಸಾಹತುಗಳನ್ನು ನಿಗಮವು ಸ್ಥಾಪಿಸಿದೆ, ಈ ಕೈಗಾರಿಕಾ ವಸಾಹತುಗಳಲ್ಲಿ 5758 ಷೆಡ್ಡುಗಳು ನಿರ್ಮಾಣಗೊಂಡಿದ್ದು, 5498 ಷೆಡ್ಡುಗಳು ಹಂಚಿಕೆಯಾಗಿರುತ್ತವೆ.

ಪ್ರಸಕ್ತ ಸಾಲಿನಲ್ಲಿ ಪಾವಗಡ-ತುಮಕೂರು ಜಿಲ್ಲೆ, ಎಂ.ಕೆ.ಕಟ್ಟೆ-ಚಿತ್ರದುರ್ಗ ಜಿಲ್ಲೆ, ಚಿಕ್ಕಹೊಸಹಳ್ಳಿ-ಆನೇಕಲ್ ತಾಲ್ಲೂಕು, ಸಿಂಧನೂರು-ರಾಯಚೂರು ಜಿಲ್ಲೆ, ರಾಣಿಬೆನ್ನೂರು-ಹಾವೇರಿ ಜಿಲ್ಲೆ, ಬೇಲೂರು-

ಧಾರವಾಡ ಜಿಲ್ಲೆ, ಬಸವನಕಲ್ಯಾಣ-ಬೀದರ್ ಜಿಲ್ಲೆಗಳಲ್ಲಿ ಕೈಗಾರಿಕಾ ವಸಾಹುತಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಹೊಸ ಕೈಗಾರಿಕಾ ಮಳಿಗೆಗಳ ನಿರ್ಮಾಣ ಕೈಗೊಂಡಿಲ್ಲ.

400 ಪ್ರಕರಣಗಳನ್ನು ಕೈಗಾರಿಕಾ ಆದಾಲತ್‌ಗಳಲ್ಲಿ ಇತ್ಯರ್ಥ ಮಾಡಲಾಗಿದೆ. ರೂ. 6805 ಲಕ್ಷ ಮೌಲ್ಯದ 18,769 ಮೆಟ್ರಿಕ್ ಟನ್ ಕಬ್ಬಿಣ ಮತ್ತು ಉಕ್ಕು ಹಾಗೂ ರೂ. 637 ಲಕ್ಷ ಮೌಲ್ಯದ 39072 ಮೆಟ್ರಿಕ್ ಟನ್ ಕಲ್ಲಿದ್ದಲನ್ನು ಅಗತ್ಯವಿರುವ ಕೈಗಾರಿಕಾ ಘಟಕಗಳಿಗೆ ಮಾರಾಟ ಮಾಡಲಾಗಿದೆ.

## ಸಿ) ವಿಶೇಷ ಆರ್ಥಿಕ ವಲಯಗಳು :

ಕರ್ನಾಟಕ ರಾಜ್ಯದಲ್ಲಿ ವಿಶೇಷ ಆರ್ಥಿಕ ವಲಯಗಳ ಬೆಂಬಲಿಸಲು ಹಾಗೂ ಪ್ರೋತ್ಸಾಹಿಸಲು ರಾಜ್ಯ ವಿಶೇಷ ಆರ್ಥಿಕ ವಲಯ ನೀತಿ 2009ನ್ನು ಘೋಷಿಸಲಾಗಿದೆ. ಈ ನೀತಿಯು ಅನೇಕ ರಿಯಾಯಿತಿ ಹಾಗೂ ಬೆಂಬಲಗಳನ್ನು ಕೈಗಾರಿಕೆಗಳಿಗೆ ನೀಡುವುದರೊಂದಿಗೆ ಮಾರ್ಗಸೂಚಿಯ ಪಾಲನೆಯನ್ನು ಸರಳೀಕರಣಗೊಳಿಸಿದೆ.

ವಿದೇಶಿ ಬಂಡವಾಳ ಹಾಗೂ ರಫ್ತನ್ನು ಹೆಚ್ಚಿಸುವ ಉದ್ದೇಶದಿಂದ ಎಸ್.ಇ.ಜೆಡ್.ಗಳನ್ನು ಸ್ಥಾಪಿಸಲಾಗುತ್ತಿದೆ. ಎಸ್.ಇ.ಜೆಡ್. ಎಂದರೆ ವಾಣಿಜ್ಯ ವ್ಯವಹಾರಕ್ಕೆ ಸಕಲ ರೀತಿಯ ಸೌಲಭ್ಯಗಳಿರುವ ಔದ್ಯಮಿಕ ಪ್ರದೇಶ ಹಾಗೂ ಇದೊಂದು ತೆರಿಗೆ ರಹಿತ ವಲಯ.

**ರಾಜ್ಯದಲ್ಲಿ ಅನುಮೋದನೆಯಾಗಿರುವ SEZ ಗಳ ವಿವರ:**

**ರೂ.ಕೋಟಿಗಳಲ್ಲಿ.**

| ಅನುಮೋದನೆಗಳು | ಪ್ರದೇಶ (ಹೆಕ್ಟೇರ್‌ಗಳಲ್ಲಿ) | ಹೂಡಬಹುದಾದ ಬಂಡವಾಳ | ಉದ್ಯೋಗವಕಾಶ |
|---|---|---|---|
| ಪೂರ್ಣ ಅನುಮೋದನೆಗಳು [ಫಾರ್ಮಲ್ ಅಪ್ರೂವಲ್ 51] | 2,499 | 30,671 | 10,69,385 |
| ತಾತ್ವಿಕ ಅನುಮೋದನೆಗಳು [ಇನ್‌ಪ್ರಿನ್ಸಿಪಲ್ ಅಪ್ರೂವಲ್]- 09 | 6,344 | 20,268 | 2,34,500 |

ಪೂರ್ಣ ಅನುಮೋದನೆಗೊಂಡಿರುವ ಎಸ್.ಇ.ಜೆಡ್.ಗಳಲ್ಲಿ 41 ಐಟಿ/ಐಟಿ.ಇ.ಎಸ್, 3 ಬಿಟಿ ಹಾಗೂ 7 ನಿರ್ದಿಷ್ಟ ಉತ್ಪನ್ನಗಳ ಎಸ್.ಇ.ಜೆಡ್.ಗಳಾಗಿರುತ್ತವೆ.

ಕೆಐಎಡಿಬಿಯು ಹಾಸನದಲ್ಲಿ ಮೂರು (ಜವಳಿ, ಆಹಾರ, ಸಂಸ್ಕರಣೆ, ಫಾರ್ಮಾ) ಮತ್ತು ಮಂಗಳೂರಿನಲ್ಲಿ ಐಟಿ/ಐಟಿಇಎಸ್ ಎಸ್.ಇ.ಜೆಡ್‌ಗಳನ್ನು ಸ್ಥಾಪಿಸುತ್ತಿದೆ.

## ಎಸ್.ಇ.ಜೆಡ್.ಗಳ ಅನುಷ್ಠಾನ

ಇಲ್ಲಿಯವರೆಗೆ ಪೂರ್ಣ ಅನುಮೋದನೆ ಪಡೆದ 51 ಎಸ್.ಇ.ಜೆಡ್.ಗಳಲ್ಲಿ 29 ಎಸ್.ಇ.ಜೆಡ್.ಗಳಿಗೆ ಭಾರತ ಸರ್ಕಾರವು ತನ್ನ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸಿದೆ.

ಅಧಿಸೂಚನೆ ಹೊರಡಿಸಿರುವ ಎಸ್.ಇ.ಜೆಡ್.ಗಳಲ್ಲಿ 17 ಎಸ್.ಇ.ಜೆಡ್‌ಗಳು ತಮ್ಮ ಮೊದಲನೆ ಹಂತದ ಉತ್ಪಾದನೆಯನ್ನು ಕಾರ್ಯಾರಂಭ ಮಾಡಿರುತ್ತವೆ.

ಇಲ್ಲಿಯವರೆಗೆ ರೂ. 12,885.00 ಕೋಟಿ ಬಂಡವಾಳವನ್ನು ಎಸ್.ಇ.ಜೆಡ್.ಗಳಲ್ಲಿ ಹೂಡಲಾಗಿದೆ ಹಾಗೂ 79,440 ಜನರಿಗೆ ಉದ್ಯೋಗ ಲಭಿಸಿದೆ.

ಎಸ್.ಇ.ಜೆಡ್‌ಗಳಿಂದ ಕೆಳಕಂಡಂತೆ ರಫ್ತು ಆಗಿರುತ್ತದೆ.

| ವರ್ಷ | ರಫ್ತು [ರೂ. ಕೋಟಿಗಳಲ್ಲಿ] |
|---|---|
| 2007–2008 | 1,673.00 |
| 2008–2009 | 7,608.00 |
| 2009–2010 | 10177.00 |
| **ಒಟ್ಟು** | **19,458.00** |

## ಡಿ) ಅಸೈಡ್ ಯೋಜನೆ:

2002–03 ರಿಂದ ವಾಣಿಜ್ಯ ಮಂತ್ರಾಲಯ ಭಾರತ ಸರ್ಕಾರವು ರಫ್ತು ಅಭಿವೃದ್ದಿಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಅದಕ್ಕೆ ಸಂಬಂಧಪಟ್ಟ ಚಟುವಟಿಕೆಗಳನ್ನು ಉತ್ತೇಜಿಸಿ ಪ್ರತಿ ರಾಜ್ಯದ ರಫ್ತು ಕಾರ್ಯನಿರ್ವಹಣೆಯನ್ನು ಉತ್ತೇಜಿಸಲು ಈ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯ ಉದ್ದೇಶವು ರಾಜ್ಯಗಳ ರಫ್ತನ್ನು ಉತ್ತೇಜಿಸಲು ಸಹಾಯವನ್ನು ನೀಡುವುದಲ್ಲದೆ ರಫ್ತು ಬೆಳವಣಿಗೆಗೆ ಪ್ರಾಮುಖ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಾಗಿರುತ್ತದೆ. 2008–09ನೇ ಸಾಲಿನಲ್ಲಿ 18 ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಭಾರತ ಸರ್ಕಾರವು ರೂ. 41.62 ಕೋಟಿ ಅನುದಾನವನ್ನು ಮಾರ್ಚ್ 2009ರ ಅಂತ್ಯಕ್ಕೆ ಬಿಡುಗಡೆ ಮಾಡಿದೆ.

ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಸಂಸ್ಥೆಯು ಅಸೈಡ್ ಯೋಜನೆಯನ್ನು ಜಾರಿಗೊಳಿಸುವ ಅನುಷ್ಠಾನ ಸಂಸ್ಥೆಯಾಗಿದೆ. ಈ ಯೋಜನೆಯಡಿಯಲ್ಲಿ ಬರುವಂತಹ ಪ್ರಸ್ತಾವನೆಗಳನ್ನು ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ರಾಜ್ಯಮಟ್ಟದ ರಫ್ತು ಉತ್ತೇಜನ ಸಮಿತಿಯು ಪರಿಶೀಲಿಸಿ ಅಸೈಡ್ ಮಾರ್ಗಸೂಚಿಯ ಪ್ರಕಾರ ಅನುಮೋದಿಸಲ್ಪಡುತ್ತವೆ.

2009–10ನೇ ಸಾಲಿನಲ್ಲಿ ಅಸೈಡ್ ಯೋಜನೆಯಡಿ ವಾಣಿಜ್ಯ ಮಂತ್ರಾಲಯ ಭಾರತ ಸರ್ಕಾರದಿಂದ ಮೊದಲನೆ ಕಂತು ರೂ.39.54 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ಈ ಪೈಕಿ 29 ಯೋಜನೆಗಳಿಗೆ ರೂ.21.96 ಕೋಟಿ ಬಿಡುಗಡೆ ಮಾಡಲಾಗಿದೆ.

ಕರ್ನಾಟದ ರಫ್ತು ನೋಟದ ವಿವರಗಳನ್ನು ಅನುಬಂದ–7–ರಲ್ಲಿ ನೀಡಲಾಗಿದೆ.

### ಇ) ಆಹಾರ ಪಾರ್ಕ್‌ಗಳು:

ಕೋಲಾರ, ಗುಲ್ಬರ್ಗ, ಬಾಗಲಕೋಟೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಆಹಾರ ಪಾರ್ಕ್‌ಗಳ ಅನುಷ್ಠಾನಕ್ಕಾಗಿ ಒದಗಿಸಿರುವ ರೂ. 1000.00 ಲಕ್ಷಗಳಲ್ಲಿ ರೂ. 500.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

ಬೆಂಗಳೂರು (ಗ್ರಾಮಾಂತರ), ತುಮಕೂರು, ಶಿವಮೊಗ್ಗ, ದಾವಣಗೆರೆ, ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ 6 ಆಹಾರ ಪಾರ್ಕ್‌ಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಈ ಎಲ್ಲಾ ಆಹಾರ ಪಾರ್ಕ್‌ಗಳನ್ನು ಜೂನ್ 2012ಕ್ಕೆ ಪೂರ್ಣಗೊಳಿಸಲಾಗುವುದು.

## 3. <u>ಸಣ್ಣ ಮತ್ತು ಗ್ರಾಮೀಣ ಕೈಗಾರಿಕಾ ವಲಯದ ಚಟುವಟಿಕೆಗಳು</u>

### ಎ) ಹೊಸ ಕೈಗಾರಿಕಾ ನೀತಿ-2009-14:

ಕರ್ನಾಟಕ ಸರ್ಕಾರವು ಹೊಸ ಕೈಗಾರಿಕಾ ನೀತಿ 2009-2014ನ್ನು ತನ್ನ ಆದೇಶ ಸಂಖ್ಯೆ ಸಿಐ 233 ಎಸ್‌ಪಿಐ 08 ದಿನಾಂಕ 28-2-2009ರಲ್ಲಿ ಪ್ರಸ್ತುತ ಪಡಿಸಿದೆ. ಈ ನೀತಿಯ ಪ್ರಮುಖ ಅಂಶಗಳು ಈ ಕೆಳಗಿನಂತಿದೆ.

- ಮಾನವ ಸಂಪನ್ಮೂಲ ಹಾಗೂ ಸ್ವಭಾವಿಕ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ವೈಜ್ಞಾನಿಕ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದರ ಮುಖಾಂತರ ಕರ್ನಾಟಕವನ್ನು ಸಂಪತ್‌ಭರಿತ ರಾಜ್ಯವನ್ನಾಗಿ ನಿರ್ಮಿಸುವುದು.
- ಮುಂದಿನ 5 ವರ್ಷಗಳಲ್ಲಿ 10.00 ಲಕ್ಷ ಜನರಿಗೆ ಹೆಚ್ಚುವರಿ ಉದ್ಯೋಗಾವಕಾಶವನ್ನು ಕಲ್ಪಿಸುವ ಗುರಿಯನ್ನು ಹೊಂದಿದೆ.
- ರಾಜ್ಯದ ಜಿಡಿಪಿಯನ್ನು 2014ರೊಳಗೆ 20 ರಷ್ಟು ಕೈಗಾರಿಕಾ ಬೆಳವಣಿಗೆ ಮುಖಾಂತರ ಹೆಚ್ಚಿಸುವುದಾಗಿರುತ್ತದೆ.
- ಕೈಗಾರಿಕಾ ಬೆಳವಣಿಗೆಗಾಗಿ ರಾಜ್ಯದೆಲ್ಲಡೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಒತ್ತು ನೀಡುವಿಕೆ.
- ಕೆಐಎಡಿಬಿ ಮುಖಾಂತರ 1000 ದಿಂದ 2000 ಎಕರೆಯಷ್ಟು ಭೂಮಿಯನ್ನು ಪ್ರತಿ ಜಿಲ್ಲೆಗಳಲ್ಲೂ ಸ್ವಾಧೀನಪಡಿಸಿಕೊಳ್ಳಲು ರೂ.1000 ಕೋಟಿಗಳನ್ನು ಹಂಚಿಕೆ ಮಾಡಲಾಗುವುದು. ಇದರಿಂದಾಗಿ ಸಾವಿರಾರು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ರಾಜ್ಯದಲ್ಲಿ ಸ್ಥಾಪಿಸಲ್ಪಡುವುದು. ವಿದೇಶಿ ಬಂಡವಾಳವನ್ನು ಆಕರ್ಷಿಸುವುದಕ್ಕಾಗಿ ಕೈಗಾರಿಕಾ ಪಟ್ಟಣಗಳನ್ನು ಸ್ಥಾಪಿಸುವ ಪ್ರಸ್ತಾವನೆ ಕೂಡ ಇದೆ.
- ರಾಜ್ಯಾದ್ಯಂತ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವುದು.

- ಉಕ್ಕು, ಸಿಮೆಂಟ್, ಸಕ್ಕರೆ, ಆಟೋಮೋಬೈಲ್, ಆಹಾರ ಪರಿಷ್ಕರಣೆ ಸಿದ್ದ ಉಡುಪು ತಯಾರಿಕೆ ಮುಂತಾದ ಕೈಗಾರಿಕಾ ಚಟುವಟಿಕೆಗಳ ವಿಶೇಷ ವಲಯಗಳನ್ನು ಅಭಿವೃದ್ಧಿ ಪಡಿಸುವುದು.
- ಉದ್ಯಮಿಗಳನ್ನು ಉತ್ತೇಜಿಸಲು ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿರುವ ಮಾರ್ಗದರ್ಶಿ ಕೋಶಗಳ ಬಲವರ್ಧನೆ. ಈ ಕೋಶವು ಉದ್ಯಮಿಗಳಿಗೆ ಕೈಗಾರಿಕಾ ಸ್ಥಾಪನೆಯ ಪ್ರಾರಂಭದಿಂದ ಅಂತಿಮ ಹಂತದವರೆಗೆ ಸಹಾಯವನ್ನು ನೀಡುತ್ತದೆ.

## ಬಿ) ವಿಷನ್ ಗ್ರೂಪನ್ ಸಂಯೋಜನೆ:

ಕರ್ನಾಟಕದ ತ್ವರಿತ ಕೈಗಾರಿಕೀಕರಣಕ್ಕಾಗಿ ಹಾಗೂ ಕೈಗಾರಿಕಾಭಿವೃದ್ದಿಯ ನೀತಿ ನಿಯಮಗಳ ತಯಾರಿಕೆಯಲ್ಲಿ ಮಾರ್ಗದರ್ಶನವನ್ನು ನೀಡಲು ಶ್ರೀ ಕ್ರಿಸ್ ಗೋಪಾಲಕೃಷ್ಣನ್, ಮುಖ್ಯ ಕಾರ್ಯನಿರ್ವಣಾಧಿಕಾರಿ ಇನ್ಫೋಸಿಸ್ ಅವರ ಅಧ್ಯಕ್ಷತೆಯಲ್ಲಿ ವಿಷನ್ ಗ್ರೂಪನ್ನು ಸಂಯೋಜಿಸಲಾಗಿದೆ. ಇದುವರೆಗೆ ವಿಷನ್ ಗ್ರೂಪ್ ಆರು ಸಭೆಗಳನ್ನು ನಡೆಸಿದೆ.

## ಕೈಗಾರಿಕಾ ನೀತಿ –2009–14: ದಿನಾಂಕ 31–3–2010ರವರೆಗಿನ ಪ್ರಗತಿ:

- 21 ಜಿಲ್ಲೆಗಳಲ್ಲಿ 234 ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಗೆ ಒಟ್ಟು ರೂ.12.84 ಕೋಟಿಯಷ್ಟು ಬಂಡವಾಳ ಉತ್ತೇಜನ ಸಹಾಯಧನವನ್ನು ಮಂಜೂರು ಮಾಡಲಾಗಿದೆ.
- 5 ಬೃಹತ್ ಕೈಗಾರಿಕಾ ಘಟಕಗಳಿಗೆ ಪ್ರವೇಶ ತೆರಿಗೆ ರಿಯಾಯಿತಿ ಪ್ರಮಾಣ ಪತ್ರವನ್ನು ನೀಡಲಾಗಿದೆ.
- 3 ಕೈಗಾರಿಕಾ ಘಟಕಗಳಿಗೆ ತ್ಯಾಜ್ಯವಸ್ತು ಪರಿಷ್ಕರಣಾ ಘಟಕಗಳಿಗಾಗಿ [ಎಫ್ಲ್ಯೂಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್] ರೂ. 154.00 ಲಕ್ಷ ಸಹಾಯಧನವನ್ನು ಮಂಜೂರು ಮಾಡಲಾಗಿದೆ.

## ಸಿ) ಕೈಗಾರಿಕಾ ಅದಾಲತ್ :

ರಾಜ್ಯದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಬೆಳವಣಿಗೆಗೆ ಉತ್ತೇಜನ ನೀಡಲು ಕೈಗಾರಿಕೋದ್ಯಮಿಗಳ ಅಹವಾಲುಗಳನ್ನು ಸ್ವೀಕರಿಸಿ, ಸ್ಥಳದಲ್ಲೇ ಒಂದೇ ಸೂರಿನಡಿ ಕೈಗಾರಿಕೋದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಸಿದ್ಧಪಡಿಸಿರುವ ಒಂದು ವೇದಿಕೆಯಾಗಿದೆ. ಸಂಬಂಧಿಸಿದ ಎಲ್ಲ ಇಲಾಖೆಗಳು/ನಿಗಮ ಮಂಡಳಿಗಳು/ಸಂಘ ಸಂಸ್ಥೆಗಳು ಮತ್ತು ಕೈಗಾರಿಕೋದ್ಯಮಿಗಳನ್ನು ಒಂದೇ ಸೂರಿನಡಿ ಒಟ್ಟುಗೂಡಿಸಿ ಸಮಸ್ಯೆಗಳ ಇತ್ಯರ್ಥವನ್ನು ಮಾಡುವುದಾಗಿರುತ್ತದೆ. ಕೈಗಾರಿಕಾ ಅದಾಲತ್‌ಗಳನ್ನು ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ, ವಿಭಾಗಗಳಲ್ಲಿ ಮತ್ತು ಬೆಂಗಳೂರು(ನಗರ) ಜಿಲ್ಲೆಯಲ್ಲಿ ಯಶಸ್ವಿಯಾಗಿ ಏರ್ಪಡಿಸಲಾಗಿದೆ.

ಕೈಗಾರಿಕಾ ಅದಾಲತ್‌ನ ಪೂರ್ವಭಾವಿ ಸಭೆಗಳನ್ನು ಸಂಬಂಧಿಸಿದ ಎಲ್ಲ ಇಲಾಖೆ, ಇತರರನ್ನೊಳಗೊಂಡ ವಿಭಾಗೀಯ ಮಟ್ಟ/ಜಿಲ್ಲಾ ಮಟ್ಟದಲ್ಲಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ನಡೆಸಲಾಯಿತು. ಮೇಲಿನ ಸಭೆಗಳನ್ನು ನಡೆಸಲಾಗಿ, ಸಂಬಂಧಿಸಿದವರೆಲ್ಲರೂ ಕೈಗಾರಿಕೋದ್ಯಮಿಗಳ ಅಹವಾಲುಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಪ್ರೇರೇಪಿಸಲಾಗಿತ್ತು. ಕೈಗಾರಿಕೋದ್ಯಮಿಗಳ ಸಮಸ್ಯೆಗಳನ್ನು ನೋಡುವ ದೃಷ್ಟಿಕೋನದಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದೆ. ಸಂಬಂಧಪಟ್ಟ ಎಲ್ಲ ಅಧಿಕಾರಿಗಳು ಮುಂದಿನ ಅದಾಲತ್‌ನೊಳಗೆ ಪರಿಹಾರ ಕಂಡುಕೊಂಡು, ಅದಾಲತ್‌ನಲ್ಲಿ ಅದನ್ನು ಮುಂದಿಡುವ ಉತ್ಸಾಹ ತೋರುವಷ್ಟು ಪರಿವರ್ತನೆ ಕಂಡು ಬಂದಿದೆ.

ಕೆಲವು ಸಮಸ್ಯೆಗಳಿಗೆ ಸಭೆಯ ಪ್ರಾರಂಭದಲ್ಲಿ ಪರಿಹಾರಗಳನ್ನು ತಿಳಿಸಲಾಗುತ್ತಿತ್ತು. ಇನ್ನು ಕೆಲವು ಸಮಸ್ಯೆಗಳಿಗೆ ಅದಾಲತ್ ನಡೆಯುತ್ತಿರುವ ಅವಧಿಯಲ್ಲಿ ಪರಿಹಾರಗಳನ್ನು ಕಂಡುಕೊಳ್ಳಲಾಗುತ್ತಿತ್ತು. ಪರಿಹಾರವಾಗದೇ ಉಳಿದ ಸಮಸ್ಯೆಗಳನ್ನು ಮುಂಬರುವ ಅದಾಲತ್‌ಗಳಲ್ಲಿ ಪರಿಹರಿಸುವುದಾಗಿ ಮಾನ್ಯ ಮಂತ್ರಿಗಳು ಆಶ್ವಾಸನೆ ನೀಡಿದರು. ಅದಾಲತ್‌ಗಳನ್ನು ಕ್ರಮವಾಗಿ ನಡೆಸುತ್ತಾ ಬಂದಂತೆ ಅಧಿಕಾರಿ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಪ್ರೇರೇಪಿಸಲಾಗಿದೆ. ಈ ಪ್ರೇರೇಪಣೆಯಿಂದಾಗಿ ರಾಜ್ಯದ 'ಬಂಡವಾಳ ಸ್ನೇಹಿ' ವರ್ಚಸ್ಸು ಹೆಚ್ಚಿದೆ. ಕೈಗಾರಿಕಾ ಅದಾಲತ್ ಕಾರ್ಯಕ್ರಮ ಮುಂದುವರೆಸಿಕೊಂಡು ಹೋದಲ್ಲಿ, ವ್ಯವಸ್ಥೆಯನ್ನು ಇನ್ನೂ ಹೆಚ್ಚು ಪ್ರಗತಿ ಪರವಾಗಿ ಕಾರ್ಯನಿರ್ವಹಿಸಲು ಪ್ರೇರೇಪಿಸಿ ರಾಜ್ಯದ ಬಂಡವಾಳ ಸ್ನೇಹಿ ವರ್ಚಸ್ಸನ್ನು ಇನ್ನೂ ಉತ್ತಮಪಡಿಸಲಾಗುವುದು.

- 1146 ಅಹವಾಲುಗಳನ್ನು ಸ್ವೀಕರಿಸಲಾಯಿತು.
- 493 ಸಮಸ್ಯೆಗಳಿಗೆ ಈಗಾಗಲೇ ಪರಿಹಾರ ಕಂಡುಕೊಳ್ಳಲಾಗಿದೆ.
- 653 ಪ್ರಕರಣಗಳಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಕ್ರಮಕೈಗೊಳ್ಳಲಾಗುತ್ತಿದೆ.
- ಪ್ರಮುಖ ನಗರಗಳಲ್ಲಿ ಅದಾಲತ್ ನಡೆಸಲು ಯೋಜಿಸಲಾಗಿದೆ.

### ಡಿ) 4ನೇ ಅಖಿಲ ಭಾರತ ಎಂಎಸ್‌ಎಂಇ ಘಟಕಗಳ ಗಣತಿ :

ಭಾರತ ಸರ್ಕಾರದ ಅತಿಸಣ್ಣ, ಸಣ್ಣ ಮತ್ತು ಮದ್ಯಮ ಕೈಗಾರಿಕಾ ಘಟಕಗಳ ಮಂತ್ರಾಲಯ, ಅಭಿವೃದ್ಧಿ ಆಯುಕ್ತರ ಕಛೇರಿ, ನವದೆಹಲಿ ಇವರ ಮಾರ್ಗದಶನದಂತೆ 4ನೇ ಆಖಿಲ ಭಾರತ ನೋಂದಾಯಿತ ಅತಿಸಣ್ಣ, ಸಣ್ಣ ಮತ್ತು ಮದ್ಯಮ ಕೈಗಾರಿಕಾ ಘಟಕಗಳ ಗಣತಿ ಹಾಗೂ ನೊಂದಣಿ ಆಗದಿರುವ ಘಟಕಗಳ ಮಾದರಿ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ನೋಂದಾಯಿತ ಅತಿಸಣ್ಣ, ಸಣ್ಣ ಮತ್ತು ಮದ್ಯಮ ಕೈಗಾರಿಕಾ ಘಟಕಗಳ ಫ್ರೇಮ್ ಲಿಸ್ಟನ್ನು ನವೀಕರಿಸಲು, ರೊಗಗ್ರಸ್ತ ಘಟಕಗಳನ್ನು ಕಂಡುಹಿಡಿಯುವುದು, ಪರಿಣಾಮಕಾರಿಯಾದ ಕೈಗಾರಿಕಾ ನೀತಿಗಳನ್ನು ರೂಪಿಸಿ ಅನುಷ್ಟಾನಗೊಳಿಸಲು ಮತ್ತು ಕೈಗಾರಿಕಾಭಿವೃದ್ಧಿಯ ಆರ್ಥಿಕ ಸೂಚ್ಯಾಂಕಗಳನ್ನು ಕಂಡು ಹಿಡಿಯಲು ಹಾಗು ಕೈಗಾರಿಕಾ ಘಟಕಗಳ ಮಾಹಿತಿಯನ್ನು ಆಗಿಂದಾಗ್ಗೆ ಪರಿಷ್ಕರಿಸುವ ಸಲುವಾಗಿ 4ನೇ ಆಖಿಲ ಭಾರತ ಗಣತಿಯನ್ನು2008-09 ಕೈಗೊಳ್ಳಲಾಗಿದೆ. ಸದರಿ 4 ನೇ ಗಣತಿಯಲ್ಲಿ 16,11,655 ಘಟಕಗಳು ಕಾರ್ಯನಿರತವಾಗಿದ್ದು, ಈ ಪೈಕಿ ಶೇ. 37 ರಷ್ಟು ಉತ್ಪಾದನಾ ವಲಯದಲ್ಲಿ ಹಾಗೂ ಶೇ. 63 ಸೇವಾ ವಲಯದಲ್ಲಿ ನಿರತವಾಗಿವೆ. ಎಂ.ಎಸ್.ಎಂ.ಇ. ಘಟಕಗಳ ಗಣತಿಯ ವರದಿ ತಯಾರಿಕೆಯ ಪ್ರಗತಿಯಲ್ಲಿದೆ.

## 4. ಕೈಗಾರಿಕಾ ಅಭಿವೃದ್ಧಿ ಚಟುವಟಿಕೆಗಳು

### ಎ) ಕೈಗಾರಿಕಾ ವಿಕಾಸ:

ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವ ಉದ್ದೇಶದಿಂದ ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯ ವರದಿಯಂತೆ 79 ಅತಿ ಹೆಚ್ಚು ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಲಾಗಿದೆ. ಈ ಯೋಜನೆಯು ಸ್ಥಳೀಯ ಸಂಪನ್ಮೂಲಗಳು ಕುಶಲತೆ ಹಾಗೂ ಮೂಲಭೂತ ಸೌಕರ್ಯಗಳನ್ನು ದೃಷ್ಠಿಯಲ್ಲಿಟ್ಟುಕೊಂಡು ಕೈಗಾರಿಕೆಗಳ ಅಭಿವೃದ್ಧಿಗೆ ಉತ್ತೇಜನ ನೀಡುವುದು.

ಈ ಕೆಳಗಿನ ಆಭಿವೃದ್ಧಿ ಸಂಸ್ಥೆಗಳನ್ನು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಗುರುತಿಸಲಾಗಿದೆ.

- **ಕೆ.ಎಸ್.ಎಸ್.ಐ.ಡಿ.ಸಿ. ಮತ್ತು ಕೆ.ಐ.ಎ.ಡಿ.ಬಿ :** ಹೊಸ ಕೈಗಾರಿಕಾ ಪ್ರದೇಶ/ವಸಾಹತುಗಳನ್ನು ಅಭಿವೃದ್ಧಿ ಪಡಿಸುವುದರೊಂದಿಗೆ ಹಾಲಿ ಇರುವ ಕೈಗಾರಿಕಾ ಪ್ರದೇಶ/ವಸಾಹತುಗಳನ್ನು ಉನ್ನತೀಕರಿಸುವುದಾಗಿರುತ್ತದೆ.
- **ಕೆ.ಎಸ್.ಪಿ.ಡಿ.ಸಿ ಹಾಗೂ ಕೆಹೆಚ್‌ಡಿಸಿ** : ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ಕಟ್ಟುವುದು. ಹಾಗೂ ವಸತಿ ಕಾರ್ಯಗಾರ ಪವರ್‌ಲೂಂ / ಹ್ಯಾಂಡ್‌ಲೂಂ ಸಂಕೀರ್ಣಗಳನ್ನು ನಿರ್ಮಿಸುವುದು. ಯಂತ್ರೋಪಕರಣಗಳ ಆಧುನೀಕರಣ, ತರಬೇತಿ ಇತ್ಯಾದಿ.
- **ಕೆ.ಎಸ್.ಸಿ.ಡಿ.ಸಿ ಮತ್ತು ಕೆ.ಎಸ್.ಸಿ.ಸಿ.ಎಫ್ :** ನಾರು ಗುಂಪು ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವುದು.
- **ಸಿಡಾಕ್ ಮತ್ತು ಟೆಕ್ಸಾಕ್ :** ಉದ್ಯಮಶೀಲತಾ ಅಭಿವೃದ್ದಿ ಕಾರ್ಯಕ್ರಮಗಳು/ಇಎಪಿ ಕುಶಲತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಸಂಪನ್ಮೂಲ ನಕ್ಷೆಗಳನ್ನು ತಯಾರಿಸುವುದು ಇತ್ಯಾದಿ.

ಆಯವ್ಯಯದಲ್ಲಿ ರೂ.570.00 ಲಕ್ಷಗಳನ್ನು ಒದಗಿಸಲಾಗಿದೆ. ಇದರಲ್ಲಿ ರೂ.451.00 ಲಕ್ಷಗಳನ್ನು ಬಿಡುಗಡೆಗೊಳಿಸಿದೆ.

**ಅನುಷ್ಠಾನ ಮಾಡುತ್ತಿರುವ ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿವೆ.**

| ಕ್ರಮ ಸಂಖ್ಯೆ | ಅನುಷ್ಠಾನಗೊಳಿಸುವ ಸಂಸ್ಥೆ | ಬಿಡುಗಡೆ ಗೊಳಿಸಿರುವ ಅನುದಾನ (ರೂ.ಲಕ್ಷಗಳಲ್ಲಿ) | ಉದ್ದೇಶ |
|---|---|---|---|
| 1 | ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ | 86.00 | 56 ನೇಯ್ಗೆದಾರರಿಗೆ ವಸತಿ ಕಾರ್ಯಗಾರ ನಿರ್ಮಾಣಕ್ಕೆ ಮತ್ತು 112 ಮಗ್ಗಗಳನ್ನು ಖರೀದಿಸಿ ನೇಯ್ಗೆದಾರರಿಗೆ ಒದಗಿಸಲು |

| ಕ್ರಮ ಸಂಖ್ಯೆ | ಅನುಷ್ಠಾನಗೊಳಿಸುವ ಸಂಸ್ಥೆ | ಬಿಡುಗಡೆ ಗೊಳಿಸಿರುವ ಅನುದಾನ (ರೂ.ಲಕ್ಷಗಳಲ್ಲಿ) | ಉದ್ದೇಶ |
|---|---|---|---|
| 2 | ಕರ್ನಾಟಕ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ | ಅ) 194.00<br><br>ಆ) 131.00 | ಅ)ತುಮಕೂರು ಜಿಲ್ಲೆಯ ಪಾವಗಡದಲ್ಲಿ 20 ಎಕರೆ ವಿಸ್ತೀರ್ಣದ ಕೈಗಾರಿಕಾ ವಸಾಹತು ಅಭಿವೃದ್ಧಿಗಾಗಿ<br><br>ಆ) ರಾಯಚೂರು ಜಿಲ್ಲೆಯ ಸಿಂದನೂರಿನಲ್ಲಿ ಕೈಗಾರಿಕಾ ಶೆಡ್ಡುಗಳ ನಿರ್ಮಾಣ ಮತ್ತು ಪೂರಕ ಸೌಲಭ್ಯಗಳನ್ನು ಒದಗಿಸಲು |
| 3. | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ | 40.00 | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಸಂಡಾ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಲು |
| | ಒಟ್ಟು | 451.00 | |

## ಬಿ) ಸಣ್ಣ ಕೈಗಾರಿಕೆ ಹಾಗೂ ಅತಿ ಸಣ್ಣ ಕೈಗಾರಿಕಾ ಘಟಕಗಳಿಗೆ ರಾಜ್ಯ ಬಂಡವಾಳ ಸಹಾಯಾನುದಾನ :

ಪ್ರಸಕ್ತ ಸಾಲಿನಲ್ಲಿ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ರೂ. 20 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಈವರೆಗೆ 1475 ಘಟಕಗಳಿಗೆ ರೂ. 18.76 ಕೋಟಿಗಳನ್ನು ವಿತರಿಸಲಾಗಿದೆ.

## ಸಿ) ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆ:

ಈ ಯೋಜನೆಯು ಪ್ರಸಕ್ತ ಸಾಲಿನಿಂದ ಮುಂದುವರೆದ ಯೋಜನೆಯಾಗಿಲ್ಲ. ಇದರ ಬದಲಾಗಿ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಎಂಬ ಹೊಸ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ಜಾರಿಗೊಳಿಸಿದೆ.

## ಡಿ) ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಕಾರ್ಯಕ್ರಮ :

ದಿನಾಂಕ 15-8-2008 ರಿಂದ ಜಾರಿಗೆ ಬರುವಂತೆ ಭಾರತ ಸರ್ಕಾರವು ಈ ಹೊಸ ಯೋಜನೆಯನ್ನು ಘೋಷಿಸಿದೆ. ಈ ಯೋಜನೆಯು ನಿರುದ್ಯೋಗಿ ಯುವಕರಿಗೆ ಸ್ವ ಉದ್ಯೋಗವನ್ನು ಕಲ್ಪಿಸುವ ಸಲುವಾಗಿ ಆರ್ಥಿಕ ಸಹಾಯವನ್ನು ಪಡೆದು ಅವರುಗಳು ತಮ್ಮದೇ ಆದ ಕೈಗಾರಿಕಾ/ವ್ಯಾಪಾರ/ಸೇವಾ ಘಟಕಗಳನ್ನು ಪ್ರಾರಂಭಿಸಬಹುದಾಗಿದೆ. ಈ ಯೋಜನೆಯು ಗ್ರಾಮೀಣ ಕುಶಲ ಕರ್ಮಿಗಳಿಗೆ ಉದ್ಯೋಗವನ್ನು ಸೃಷ್ಟಿಸುವ ಮುಖಾಂತರ ಅವರನ್ನು ಹಳ್ಳಿಯಿಂದ ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಡೆಯುತ್ತದೆ.. ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಗುರಿಗಳನ್ನು ಹೊಂದಿವೆ. ಈ ಯೋಜನೆಗೆ ಉತ್ತಮ ಪ್ರಚಾರವನ್ನು ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಒಟ್ಟು 1,190 ಗುರಿಯನ್ನು ನಿಗದಿಪಡಿಸಿದ್ದು ಒಟ್ಟು ರೂ. 14.28

ಕೋಟಿಗಳ ಅಂಚು ಸಹಾಯಧನವನ್ನು ಮೀಸಲಾಗಿರಿಸಿದೆ. ಜಿಲ್ಲಾ ಮಟ್ಟದ ಟಾಸ್ಕಫೋರ್ಸ್ ಸಭೆಯನ್ನು ನಡೆಸಲು ಮತ್ತು ಯೋಜನೆ ಬಗ್ಗೆ ಪ್ರಚಾರ ಪಡಿಸಲು ಸೂಚಿಸಲಾಗಿದೆ.

ಸದರಿ ಯೋಜನೆಯಡಿ ಮಾರ್ಚಿ ಅಂತ್ಯಕ್ಕೆ ರಾಜ್ಯದಲ್ಲಿ ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಒಟ್ಟು 2584 ಅರ್ಜಿಗಳನ್ನು ಸ್ವೀಕರಿಸಿದ್ದು, 1,757 ಫಲಾನುಭವಿಗಳಗೆ ಬ್ಯಾಂಕುಗಳಿಂದ ಅಂಚು ಸಹಾಯಧನ ಮಂಜೂರಾಗಿದ್ದು, ಇದರಲ್ಲಿ 511 ಫಲಾನುಭವಿಗಳಿಗೆ ರೂ. 926.85 ಲಕ್ಷಗಳ ಅಂಚು ಸಹಾಯಧನವನ್ನು ಬಿಡುಗಡೆಗೊಳಿಸಲಾಗಿದೆ.

## ಇ) ವಿಶ್ವ ಯೋಜನೆ :

ಗ್ರಾಮೀಣ ಸ್ಥಳಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸತತವಾಗಿ ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವ ಯೋಜನೆಯು ವಿಶ್ವ ಯೋಜನೆಯಾಗಿದೆ. ಈ ಯೋಜನೆಯಡಿಯಲ್ಲಿ ಸಂಘ/ಸಂಸ್ಥೆಗಳಿಗೆ, ತರಬೇತಿಗಾಗಿ, ಉತ್ಪಾದನ ಕೇಂದ್ರಗಳ ಸ್ಥಾಪನೆಗೆ, ಹಾಗೂ ಪೂರಕ ಸೇವೆಗಳಾದ ಕಚ್ಚಾ ಸಾಮಗ್ರಿಗಳ ಸರಬರಾಜು ಮತ್ತು ಮಾರುಕಟ್ಟೆ ಅಭಿವೃದ್ಧಿಗೆ ಧನಸಹಾಯ ಒದಗಿಸಲಾಗುವುದು. ಡಿಎಸ್ಎಂಎಸ್ ಮುಖಾಂತರ ಅಥವಾ ನಿಗಮ ಮತ್ತು ಮಂಡಳಿಗಳ ಮುಖಾಂತರ ಮಾರುಕಟ್ಟೆ ಸಹಾಯಧನ ನೀಡುವುದು ಇತ್ಯಾದಿಗಳನ್ನು ಒಳಗೊಂಡಿದೆ. ತರಬೇತಿ ಮತ್ತು ಕುಶಲತೆಯ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ಅಥವಾ ರಾಜ್ಯ ಮಟ್ಟದ ನಿಗಮ ಮತ್ತು ಮಂಡಳಿಗಳ ಮೂಲಕ ನೀಡಲಾಗುತ್ತಿದೆ.

## ವಿಶ್ವ ತರಬೇತಿ ಹಾಗೂ ಮೂಲಭೂತ ಸೌಲಭ್ಯಗಳು:

ಶಿವಮೊಗ್ಗ, ಗದಗ, ಬೆಂಗಳೂರು, ಚಿಕ್ಕಬಳ್ಳಾಪುರ ಮತ್ತು ಚಿತ್ರದುರ್ಗದಲ್ಲಿರುವ ಸರ್ಕಾರೇತರ ಸಂಸ್ಥೆಗಳಿಗೆ ರೂ.15.50 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ) | ಕಾರ್ಯಕ್ರಮ |
|---|---|---|---|
| 1 | ಶಿವಮೊಗ್ಗ ಜಿಲ್ಲಾ ಸ್ತ್ರೀ ಶಕ್ತಿ ವೇದಿಕೆ(ರಿ) ಶಿವಮೊಗ್ಗ | 0.42 | ಸ್ಯಾರಿ ಜರ್ದೋಸಿ ವರ್ಕ್ಸ್ ಮತ್ತು ಜರಿ ಎಂಬ್ರಾಯಿಡರಿ |
| 2 | ಶ್ರೀ ಅನ್ನದಾನ ವಿಜಯ ವಿದ್ಯಾ ಸಮಿತಿ, ಗಜೇಂದ್ರಗಡ, ರೋಣ, ಗದಗ ಜಿಲ್ಲೆ | 9.06 | ಪೂರಕ ಸೌಲಭ್ಯಗಳ ನಿರ್ಮಾಣಕ್ಕಾಗಿ |
| 3 | ಇಲಾಖೆಯ ಕುಶಲಕರ್ಮಿ ತರಬೇತಿ ಸಂಸ್ಥೆಗಳು | 5.00 | ಇಲಾಖಾ ಕುಶಲಕರ್ಮಿ ತರಬೇತಿ ಸಂಸ್ಥೆಗಳ ಮುಖಾಂತರ ತರಬೇತಿ ನೀಡಲು |
| 4 | ಡಾ:ಭೀಮ್‌ಜೀ ಕಲಾ ಯುವಕ ಸಂಘ, ಬಿ.ಜಿ.ಕೆರೆ, ಮೊಳ್‌ಕಾಲ್ಮೂರು, ಚಿತ್ರದುರ್ಗ. | 1.02 | ಪೂರಕ ಸೌಲಭ್ಯಗಳ ನಿರ್ಮಾಣಕ್ಕಾಗಿ |
| | ಒಟ್ಟು | 15.50 | |

## ಎಫ್) ಕಾಯಕನಗರ:

ಕಾಯಕನಗರ ಯೋಜನೆಯು ವಿವಿಧ ಕಸಬುಗಳಲ್ಲಿ ನಿರತರಾದ ಸಾಂಪ್ರದಾಯಿಕ ಕುಶಲಕರ್ಮಿಗಳಿಗೆ ಅಂದರೆ ಬಂಬು ಕೆಲಸಗಾರರು, ಶೀಟ್‌ಮೆಟಲ್ ಮತ್ತು ಬ್ರಾಸ್ ಕೆಲಸಗಾರರು, ಚಪ್ಪಲಿ ತಯಾರಕರು, ಶೀಟ್ ಮೆಟಲ್, ಪಿಂಜರಾ ಟೈಲರ್‌ಗಳು ಹಾಗೂ ಇನ್ನೂ ಅನೇಕ ಕಸುಬುದಾರರಿಗೆ ವಸತಿ ಮತ್ತು ಕಾರ್ಯಗಾರಗಳನ್ನು ನೀಡುವುದಾಗಿರುತ್ತದೆ. 3 ಕಾಯಕನಗರ ಕೇಂದ್ರಗಳನ್ನು ಧಾರವಾಡ ಜಿಲ್ಲೆಯ ನರೇಂದ್ರ ಗ್ರಾಮ, ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಮತ್ತು ಬೆಳಗಾವಿ ಜಿಲ್ಲೆಯ ರಾಮದುರ್ಗಗಳಲ್ಲಿ ಸ್ಥಾಪಿಸಲಾಗುತ್ತಿದೆ.

(ನರೇಂದ್ರ ಗ್ರಾಮ–411, ಹೂವಿನಹಡಗಲಿ–89 ಮತ್ತು ರಾಮದುರ್ಗ–57, ಒಟ್ಟು 557)

## ಜಿ. ಹೊಸ ಔದ್ಯಮಿಕ ಸಮೂಹಗಳ ಸ್ಥಾಪನೆ: (ಎಸ್.ಸಿ.ಪಿ./ಟಿ.ಎಸ್.ಪಿ)

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಶಲಕರ್ಮಿಗಳಿಗೆ ವಸತಿ ಕಾರ್ಯಗಾರಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಒದಗಿಸಲಾದ ಆಯವ್ಯಯ ರೂ. 1200.00 ಲಕ್ಷದಲ್ಲಿ, ರೂ. 600.00 ಲಕ್ಷ ಮಾತ್ರ ಬಿಡುಗಡೆಯಾಗಿದೆ. ಅದನ್ನು ಜಿಲ್ಲೆಗಳಿಗೆ ವಸತಿ ಕಾರ್ಯಗಾರ ನಿರ್ಮಾಣಕ್ಕೆ ಹಂಚಿಕೆ ಮಾಡಲಾಗಿದೆ. 464 ಪರಿಶಿಷ್ಟ ಕುಶಲಕರ್ಮಿಗಳ ಮತ್ತು 192 ಪರಿಶಿಷ್ಟ ಪಂಗಡಗಳ ವಸತಿ ಕಾರ್ಯಗಾರಗಳ ನಿರ್ಮಾಣ ಪ್ರಗತಿಯಲ್ಲಿದೆ. ಇದುವರೆಗೆ ರೂ. 579.96 ಲಕ್ಷಗಳು ವೆಚ್ಚವಾಗಿದೆ.

## 5) <u>ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳು:</u>

## ಎ) ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ ಯೋಜನೆ:

ಕೈಗಾರಿಕಾ ನೀತಿ 2006–11 ಹಾಗೂ 2009–14ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಕುಶಲತಾ ಅಭಿವೃದ್ಧಿ ಸಂಸ್ಥೆಗಳನ್ನು/ ತರಬೇತಿ ಕೇಂದ್ರಗಳನ್ನು ರಾಜ್ಯದ ಮುಖ್ಯ ಸ್ಥಳಗಳಲ್ಲಿ ಸ್ಥಾಪಿಸಲು ಸರ್ಕಾರವು ನೆರವು ನೀಡುತ್ತದೆ. ಸರ್ಕಾರವು ಈ ಯೋಜನೆಯ ಅನುಷ್ಠಾನಕ್ಕಾಗಿ ಭೂಮಿಯನ್ನು ಹಾಗೂ ಮೂಲಭೂತ ಸೌಕರ್ಯಗಳಿಗಾಗಿ ಆರ್ಥಿಕ ಸಹಾಯವನ್ನು ಈ ಕೆಳಕಂಡಂತೆ ನೀಡಲಾಗುವುದು.

ನಿರ್ದಿಷ್ಟ ಕ್ಷೇತ್ರದಲ್ಲಿ ತರಬೇತಿಗಾಗಿ ಕೇಂದ್ರವನ್ನು ಸ್ಥಾಪಿಸುವುದಾದಲ್ಲಿ ಅವಶ್ಯಕತೆಗೆ ತಕ್ಕಂತೆ 5 ಎಕರೆಗಳಿಗೆ ಮೀರದಂತೆ ಸರ್ಕಾರಿ ಜಮೀನು ಒದಗಿಸುವುದು ಹಾಗೂ ಅದರೊಂದಿಗೆ ಸ್ಥಿರಾಸ್ತಿಗಳ ವೆಚ್ಚದ ಸಲುವಾಗಿ ಯೋಜನಾ ವೆಚ್ಚದ ಶೇಕಡ 50 ರಷ್ಟನ್ನು ಗರಿಷ್ಠ ರೂ 200 ಲಕ್ಷಗಳಿಗೆ ಮೀರದಂತೆ ಅನುದಾನ ಒದಗಿಸುವುದು.

ತರಬೇತಿ ಕೇಂದ್ರವನ್ನು ನಡೆಸಲು ಅವರ್ತಕ ವೆಚ್ಚವಾಗಿ ಪ್ರತಿ ಅಭ್ಯರ್ಥಿಗೆ ಪ್ರತಿ ಕೋರ್ಸ್‌ಗೆ ರೂ.750/– ರಂತೆ 3 ವರ್ಷಗಳವರೆಗೆ ಪ್ರತಿ ವರ್ಷಕ್ಕೆ ರೂ. 15.00 ಲಕ್ಷಗಳಿಗೆ ಮೀರದಂತೆ ಹಣಕಾಸು ಸೌಲಭ್ಯವನ್ನು ಒದಗಿಸುವುದು. ಈಗಾಗಲೇ ಒಟ್ಟು 21 ಸಂಸ್ಥೆ/ಘಟಕಗಳನ್ನು ರಾಜ್ಯ ಮಟ್ಟದ ಆಯ್ಕೆ

ಸಮಿತಿ ಮೂಲಕ ಆಯ್ಕೆ ಮಾಡಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಅನುಮೋದನೆ ಪಡೆದಿದ್ದು, ಪ್ರಸಕ್ತ ಸಾಲಿನಲ್ಲಿ ಎನ್.ಎಸ್.ಇನ್‌ಪೋಟೆಕ್ ನಿಯಮಿತ, ಹುಬ್ಬಳ್ಳಿರವರಿಗೆ ರೂ. 89.429 ಲಕ್ಷ ಮತ್ತು ವಿ.ವಿ.ವಿ.ಸಂಘ, ಬಾಗಲಕೋಟೆರವರಿಗೆ ರೂ.32.78 ಲಕ್ಷಗಳನ್ನು ಒಟ್ಟು ರೂ. 119.21 ಲಕ್ಷ ಬಿಡುಗಡೆ ಮಾಡಲಾಗಿದೆ.

## ಬಿ) ಆಭರಣ ತರಬೇತಿ ಸಂಸ್ಥೆ

2007–08ರ ಆಯವ್ಯಯ ಭಾಷಣದಲ್ಲಿ ಕಾರವಾರ ಮತ್ತು ಬೆಂಗಳೂರಿನಲ್ಲಿ ಆಭರಣ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ಯುವ ಕುಶಲಕರ್ಮಿಗಳಿಗೆ ಆಭರಣಗಳ ತಯಾರಿಕೆಯಲ್ಲಿ ಹೆಚ್ಚಿನ ಪರಿಣಿತಿ ಹಾಗೂ ವೃತ್ತಿಪರತೆಯನ್ನು ಹೊಂದುವ ತರಬೇತಿಯನ್ನು ನೀಡುವುದಾಗಿರುತ್ತದೆ.

ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಯನ್ನು ಈ ಆಭರಣ ತರಬೇತಿ ಸಂಸ್ಥೆ ಅನುಷ್ಠಾನಕ್ಕಾಗಿ ನೋಡಲ್ ಸಂಸ್ಥೆಯಾಗಿ ಗುರುತಿಸಲಾಗಿದೆ ಹಾಗೂ ರೂ.101.00 ಲಕ್ಷಗಳನ್ನು ಕರ್ನಾಟಕ ಸರ್ಕಾರವು ಈ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಯು ಈ ಆಭರಣ ತರಬೇತಿ ಸಂಸ್ಥೆ ಸ್ಥಾಪನೆಗೆ ಸರಿಯಾದ ಉತ್ತೇಜನದಾರರು ಬರುತ್ತಿಲ್ಲವಾದ್ದರಿಂದ ಪ್ರಸ್ಥಾವನೆಯನ್ನು ಕೈಬಿಡುವಂತೆ ಕೋರಿದ್ದಾರೆ.

ಆಭರಣ ತರಬೇತಿ ಸಂಸ್ಥೆಗೆ ರೂ. 100 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿತ್ತು. ಮರು ಹೊಂದಾಣಿಕೆ ಮಾಡಿ 80 ಲಕ್ಷ ರೂಗಳ ಅನುದಾನವನ್ನು ಜಿಟಿಟಿಸಿ ಸಂಸ್ಥೆಯ ಮಂಗಳೂರಿನಲ್ಲಿ ಇರುವ ಉಪ ಕೇಂದ್ರ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆ ಮಾಡಲಾಗಿದೆ.

## ಸಿ) ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ:

ಈ ಸಂಸ್ಥೆಯ ಮುಖ್ಯ ಉದ್ದೇಶವು ತರಬೇತಿಯನ್ನು ನೀಡುವುದಾಗಿರುತ್ತದೆ. ಈ ಸಂಸ್ಥೆಯು ಚರ್ಮ ತಾಂತ್ರಿಕತೆಯಲ್ಲಿ ಮೂರುವರೆ ವರ್ಷ ಡಿಪ್ಲೋಮೊ ಕೋರ್ಸ್, ಮತ್ತು ಅಲ್ಪಾವಧಿಯ ತರಬೇತಿಗಳನ್ನು ಚರ್ಮ ಉಡುಗೆ, ಪಾದರಕ್ಷೆ, ಚರ್ಮ ಸಾಮಾಗ್ರಿಗಳನ್ನು ತಯಾರಿಸುವುದರಲ್ಲಿ ನೀಡುತ್ತದೆ. ಈ ಸಂಸ್ಥೆಯು ಚರ್ಮ ಉತ್ಪನ್ನಗಳ ವಿನ್ಯಾಸ ಅಭಿವೃದ್ಧಿ ಮತ್ತು ಚರ್ಮ ಪರಿಕರಗಳ ಸಂಶೋಧನೆ ಮತ್ತು ಅಭಿವೃದ್ದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಸಂಸ್ಥೆಯು ವಿದ್ಯಾರ್ಥಿಗಳಿಗೆ ಕೇಂದ್ರ ಚರ್ಮ ಸಂಶೋದನಾ ಸಂಸ್ಥೆ, ಚೆನ್ನೈ ಇವರ ಸಹಯೋಗದೊಂದಿಗೆ ತರಬೇತಿಯನ್ನು ನೀಡುತ್ತದೆ.

ಚರ್ಮ ವಿನ್ಯಾಸ ಅಭಿವೃದ್ಧಿಗಾಗಿ, ಸಂಶೋಧನೆ ಮತ್ತು ತರಬೇತಿ ಕಾರ್ಯಕ್ರಮಗಳಿಗಾಗಿ ಹಾಗೂ ಆಡಳಿತ ವೆಚ್ಚಕ್ಕಾಗಿ ರೂ.60.00 ಲಕ್ಷ ಅನುದಾನ ಬಿಡುಗಡೆಗೊಳಿಸಲಾಗಿದೆ

## ಡಿ) ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) :

ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರವು 1972ರಲ್ಲಿ ಕರ್ನಾಟಕ ಸರ್ಕಾರ ಮತ್ತು ಡ್ಯಾನಿಡಾ, ಡೆನಾರ್ಕ್ ಅವರ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಈ

ಕೇಂದ್ರದಲ್ಲಿ ಟೂಲ್ ಇಂಜಿನಿಯರಿಂಗ್‌ನಲ್ಲಿ ತರಬೇತಿಯನ್ನು ಅತ್ಯಂತ ಪ್ರಾಯೋಜಿಕವಾಗಿ ನೀಡುವುದರೊಂದಿಗೆ ವೈಮಾನಿಕ ಕ್ಷೇತ್ರಕ್ಕೆ ಬೇಕಾದ ಭಾಗಗಳನ್ನು ತಯಾರಿಸಲಾಗುತ್ತದೆ. ಈ ಸಂಸ್ಥೆಯ ಮೂಲ ಉದ್ದೇಶವು ನುರಿತ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವುದು ಹಾಗೂ ಕೈಗಾರಿಕೆಗಳಿಗೆ ಉತ್ಪಾದನಾ ಕ್ಷೇತ್ರದಲ್ಲಿ ಬೇಕಾದ ಸಮಾಲೋಚನೆಯನ್ನು ನೀಡುವುದಾಗಿದೆ.

ಸಂಸ್ಥೆಯು ದೀರ್ಘಾವದಿ ಹಾಗೂ ಅಲ್ಪಾವಧಿ ತರಬೇತಿಯನ್ನು ನೀಡುತ್ತದೆ. ಉಪಕರಣಗಳು ಮತ್ತು ಡೈ ತಯಾರಿಕೆಯಲ್ಲಿ ಡಿಪ್ಲೋಮೊ, ಡಿಪ್ಲೋಮೊ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್, ಡಿಪ್ಲೋಮೊ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್, ಡಿಪ್ಲೋಮೊ ಇನ್ ಮೆಕಟ್ರಾನಿಕ್ಸ್, ಪೋಸ್ಟ್ ಡಿಪ್ಲೋಮೊ ಇನ್ ಟೂಲ್ ಡಿಸೈನ್, ಎಂ.ಟೆಕ್ ಇನ್ ಟೂಲ್ ಇಂಜಿನಿಯರಿಂಗ್ ಮುಂತಾದ ದೀರ್ಘಾವಧಿ ತರಬೇತಿಗಳನ್ನು ನಡೆಸಲಾಗುತ್ತದೆ. ಅಲ್ಪಾವದಿ ತರಬೇತಿಗಳೆಂದರೆ. ಆಟೋ ಕ್ಯಾಡ್, ಸಿಎನ್‌ಸಿ, ಮಾಸ್ಟರ್ ಕ್ಯಾಮ್, ಮೆಷಿನಿಸ್ಟ್ ಲೇಸರ್ ಮೆಷಿನಿಸ್ಟ್ ಇತ್ಯಾದಿಗಳಾಗಿರುತ್ತವೆ.

ಜಿಟಿಟಿಸಿಯು ಐ.ಎಸ್.ಆರ್.ಓ, ಎಡಿಎ, ಎಚ್.ಎ.ಎಲ್, ಎನ್.ಎ.ಎಲ್, ಐ.ಎಸ್.ಟಿ.ಆರ್.ಎ.ಸಿ, ಟೊಯೊಟಾ, ಟಿವಿಎಸ್, ಬಿ.ಹೆಚ್.ಇ.ಎಲ್ ಮುಂತಾದ ಪ್ರತಿಷ್ಠಿತ ಕಂಪನಿಗಳಿಗೆ ಉಪಕರಣಗಳನ್ನು ಅಭಿವೃದ್ಧಿಗೊಳಿಸಿದೆ. ಜಿಟಿಟಿಸಿಯು ಬೆಂಗಳೂರು ಮತ್ತು ಮೈಸೂರಿನಲ್ಲಿ ಅತಿ ಉತ್ತಮ ಪ್ರೆಷಿಸಿನ್ ಉಪಕರಣಗಾರ ಸಲಕರಣೆಗಳನ್ನು ಒಳಗೊಂಡಿರುವ ಪ್ರಮುಖ ಕೇಂದ್ರಗಳನ್ನು ಹೊಂದಿದೆ. ಕರ್ನಾಟಕದಲ್ಲಿ ಜಿಟಿಟಿಸಿಯ 18 ಕೇಂದ್ರಗಳು ಸ್ಥಾಪನೆಗೊಂಡಿದೆ.

ಹೈಟೆಕ್ ಪ್ರಿಸಿಶನ್ ಉತ್ಪಾದನೆಗಾಗಿ ಅವಶ್ಯಕತೆ ಇರುವ ಪೂರಕ ಸೌಲಭ್ಯಗಳನ್ನು ಅಳವಡಿಸಲು ರೂ. 50.00 ಲಕ್ಷಗಳನ್ನು ಬಿಡುಗಡೆಗೊಳಿಸಿದೆ, ತುಮಕೂರು ಕೇಂದ್ರಕ್ಕೆ ಅವಶ್ಯಕತೆ ಇರುವ ಉಪಕರಣಗಳ ಖರೀದಿಗಾಗಿ ರೂ. 50.00 ಲಕ್ಷಗಳನ್ನು ಮತ್ತು ಮಂಗಳೂರಿನಲ್ಲಿ ಉಪಕೇಂದ್ರ ಕಟ್ಟಡ ನಿರ್ಮಾಣ ಮಾಡಲು ರೂ. 80.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಓಟ್ಟು ರೂ. 180.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

## ಇ) ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಪಾರ್ಕ್(ಸ್ಟೆಪ್‌ಗಳು)

ಈ ಯೋಜನೆಯು ಯುವ ಇಂಜಿನಿಯರ್‌ಗಳು ಹಾಗೂ ತಂತ್ರಜ್ಞರುಗಳಿಗೆ ಹೊಸ ತಂತ್ರಜ್ಞಾನದ ಮಾಹಿತಿ ಹಾಗೂ ಬಂಡವಾಳ ಹೂಡುವಲ್ಲಿ ಅಗತ್ಯವಿರುವ ಕೌಶಲ್ಯಾಭಿದ್ಧಿ ತರಬೇತಿ/ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿ ನೀಡಿ ಉತ್ಸಾಹಕರನ್ನಾಗಿ ಮಾಡಿ ಕೈಗಾರಿಕೋದ್ಯಮಿಗಳನ್ನಾಗಿ ಪ್ರೋತ್ಸಾಹಿಸುವ ಉದ್ದೇಶವನ್ನು ಹೊಂದಿದೆ. ಈ ಮೇಲ್ಕಂಡ ಸಂಸ್ಥೆಯು ಕುಶಲತೆಯ ಉನ್ನತೀಕರಣ ಹಾಗೂ ತಾಂತ್ರಿಕತೆಯ ವರ್ಗಾವಣೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇಂತಹ 14 ಸಂಸ್ಥೆಗಳು ಸ್ಥಾಪಿಸಲ್ಪಟ್ಟಿದ್ದು ಕಾರ್ಯನಿರ್ವಹಣೆ ಮಾಡುತ್ತಿವೆ.

## ಎಫ್) ಗ್ರಾಮೀಣ ಅಭಿವೃದ್ಧಿ ಮತ್ತು ಸ್ವಉದ್ಯೋಗ ತರಬೇತಿ ಕೇಂದ್ರಗಳು (ರೂಡ್‌ಸೆಟಿಗಳು):

2001–06ನೇ ರಾಜ್ಯದ ಕೈಗಾರಿಕಾ ನೀತಿಯಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ರೂಡ್‌ಸೆಟಿ ಮಾದರಿ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ. ಈ ಗ್ರಾಮೀಣಾಭಿವೃದ್ಧಿ ಸ್ವಉದ್ಯೋಗ ತರಬೇತಿ

ಸಂಸ್ಥೆಗಳನ್ನು ಬ್ಯಾಂಕುಗಳ ಸಹಯೋಜನೆಯೊಂದಿಗೆ ಸ್ಥಾಪಿಸಲಾಗುತ್ತಿದ್ದು ಸ್ವಉದ್ಯೋಗಿಗಳನ್ನಾಗಿಸಲು ಗ್ರಾಮೀಣ ಯುವಕ ಯುವತಿಯರಿಗೆ ಎಲ್ಲಾ ರೀತಿಯ ತರಬೇತಿ ಹಾಗೂ ಮಾರ್ಗದರ್ಶನವನ್ನು ಕೈಗಾರಿಕಾ/ಸೇವಾ ವಲಯಗಳಲ್ಲಿ ಉಚಿತವಾಗಿ ಸರ್ಕಾರದ ವಿವಿಧ ಯೋಜನೆಗಳಡಿ ಒದಗಿಸುತ್ತಾ ಬಂದಿದೆ. ಇದುವರೆಗೆ 24 ಜಿಲ್ಲೆಗಳಲ್ಲಿ 29 ರೂಡ್‌ಸೆಟಿ ಸಂಸ್ಥೆಗಳು ಸ್ಥಾಪಿತವಾಗಿದ್ದು, ಇನ್ನೂ ಬೆಂಗಳೂರು ನಗರ, ದಾವಣಗೆರೆ, ಚಿಕ್ಕಬಳ್ಳಾಪುರ, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಸ್ಥಾಪಿತವಾಗಬೇಕಾಗಿರುತ್ತದೆ. ರೂಡಸೆಟಿ ಯೋಜನೆಯಡಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಯೋಜನಾ ವೆಚ್ಚದ ಶೇಕಡ 50 ರಷ್ಟು, ರೂ.20.00 ಲಕ್ಷಗಳ ಮಿತಿಗೊಳಪಟ್ಟಂತೆ ಅನುದಾನ ನೀಡಲಾಗುತ್ತಿದೆ. ರೂಡ್‌ಸೆಟಿ ಸ್ಥಾಪಿತವಾದ ಮೊದಲ 2 ರಿಂದ 3 ವರ್ಷಗಳವರೆಗೆ ಶೇಕಡ 50 ರಂತೆ ರೂ.50.00 ಲಕ್ಷಗಳ ಮಿತಿಗೊಳಪಟ್ಟು ಅವರ್ತಕ ವೆಚ್ಚವನ್ನು ಭರಿಸಲಾಗುವುದು.

2009–10 ನೇ ಸಾಲಿನಲ್ಲಿ ಒದಗಿಸಿದ ರೂ.25.00 ಲಕ್ಷಗಳಲ್ಲಿ ಕೆಳಕಂಡಂತೆ ಅನುಧಾನವನ್ನು ಬಿಡುಗಡೆಗೊಳಿಸಲಾಗಿದೆ.

| ಕ್ರಸಂ. | ಸಂಸ್ಥೆಯ ಹೆಸರು | ಮೊತ್ತ (ಲಕ್ಷ ರೂಗಳಲ್ಲಿ) | ಷರಾ |
|---|---|---|---|
| 1 | ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ (ಸರ್ಡ್), ಕುಮಟ, ಉತ್ತರ ಕನ್ನಡ ಜಿಲ್ಲೆ | 10.00 | ಕಟ್ಟಡ ನಿರ್ಮಾಣಕ್ಕಾಗಿ(2ನೇ ಹಾಗೂ ಅಂತಿಮ ಕಂತು) |
| 2 | ಕೆನರಾ ಬ್ಯಾಂಕ್ ರೂಡಸೆಟಿ, ಹಾಸನ | 07.00 | 2 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ ಇವರಿಂದ ಖರೀದಿಸಲು |
| 3 | ಸಿಂಡಿಕೇಟ್ ಬ್ಯಾಂಕ್ ರೂಡಸೆಟಿ, ಬೆಳಗಾವಿ | 08.00 | ಜಮೀನನ್ನು ಕೆ.ಐ.ಎ.ಡಿ.ಬಿ ಇವರಿಂದ ಖರೀದಿಸಲು |
| | **ಒಟ್ಟು** | **25.00** | |

ಸರ್ಕಾರದ ಆದೇಶ ಸಂಖ್ಯೆ. ವಾ.ಕೈ 32 ಕೈಯೋವಿ 2009 ದಿನಾಂಕ31.12.2009 ರಲ್ಲಿ ಭಾರತದ ಸರ್ಕಾರದ ಗ್ರಾ,ಮೀಣಾಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಯನ್ವಯ ಗ್ರಾಮೀಣ ಸ್ವಯಂ ಉದ್ಯೋಗ ತರಭೇತಿ ಕೇಂದ್ರವನ್ನು ದಾವಣಗೆರೆ ಜಿಲ್ಲೆಯಲ್ಲಿ ಸ್ಥಾಪಿಸುವುದಕ್ಕಾಗಿ ರೇಷ್ಮೆ ಕೃಷಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಶಿಫಾರಸ್ಸು ಮಾಡಿರುವಂತೆ ತೋಳಹುಣಿಸೆಯ ರೇಷ್ಮೆ ತರಬೇತಿ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಸರ್ವೆ ನಂ.57ರಲ್ಲಿನ 20 ಎಕರೆ ಜಮೀನಿನ ಪೈಕಿ 2 ಎಕರೆ ಜಮೀನನ್ನು 33 ವರ್ಷಗಳ ಅವಧಿಗೆ ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಗುತ್ತಿಗೆ ಆದಾರದ ಮೇಲೆ ನೀಡುವುದಕ್ಕೆ ಮಂಜೂರಾತಿ ನೀಡಲಾಗಿದೆ.

## 6) ಕುಶಲ ಕರ್ಮಿ ಚಟುವಟಿಕೆಗಳು

### ಎ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ

ಈ ನಿಗಮವು ಕರಕುಶಲ ಉತ್ತೇಜನ ಕಾರ್ಯಕ್ರಮಗಳಿಗೆ ನೊಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಕರಕುಶಲ ವಸ್ತುಗಳ ತಯಾರಿಕೆಗೆ ಕಚ್ಚಾ ಸಾಮಾಗ್ರಿಗಳ ಸರಬರಾಜು, ಮಾರುಕಟ್ಟೆ

ಉತ್ತೇಜನ ಮುಂತಾದ ಸೌಲಭ್ಯಗಳನ್ನು ಕರಕುಶಲ ಕರ್ಮಿಗಳಿಗೆ ನೀಡುತ್ತಿದೆ. ಈ ನಿಗಮವು 13 ಕರಕುಶಲ ಸಂಕೀರ್ಣಗಳನ್ನು ಹಾಗೂ 1222 ವಸತಿ ಕಾರ್ಯಾಗಾರಗಳನ್ನು ಹೊಂದಿದೆ. ನಿಗಮದ ಕೆಲವು ಪ್ರಮುಖ ಚಟುವಟಿಕೆಗಳು ಈ ಕೆಳಗಿನಂತಿದೆ.

1) ಬಿದರಿ ಕುಶಲ ಕರ್ಮಿಗಳಿಗೆ ಕಚ್ಚಾ ಮಾಲಿನ ಮೇಲೆ ಸಹಾಯಧನ (ಬೆಳ್ಳಿ ಮತ್ತು ಜಿಂಕ್ (Zinc)) ಕರಕುಶಲ ವಸ್ತುಗಳ ಮಾರಾಟದ ಮೇಲೆ ರಿಯಾಯಿತಿ
2) ಸ್ಥಳೀಯ ರಫ್ತು ಉತ್ತೇಜನ ಮತ್ತು ವಸ್ತು ಪ್ರದರ್ಶನ
3) ಅಖಿಲ ಭಾರತ ಕರಕುಶಲ ವಸ್ತುಗಳ ಸಾಪ್ತಾಹಿಕ ಆಚರಣೆ (ರಾಜ್ಯ ಪ್ರಶಸ್ತಿ)
4) ಕರಕುಶಲ ಕರ್ಮಿಗಳಿಗೆ ರಿಯಾಯಿತಿ ದರಗಳಲ್ಲಿ ಶ್ರೀಗಂಧದ ಮರಗಳ ಸರಬರಾಜು
5) ರಾಜ್ಯ ಮಟ್ಟದ ವಸ್ತು ಪ್ರದರ್ಶನ
6) ಕಸುಬು ಸಂಕೀರ್ಣಗಳಲ್ಲಿ ಮೂಲಭೂತ ಸೌಕರ್ಯಗಳು

ಸದರಿ ಸಂಸ್ಥೆಗೆ ರೂ.30.00 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದೆ. ರೂ.1.10 ಲಕ್ಷಗಳನ್ನು 29 ಕುಶಲಕರ್ಮಿಗಳಿಗೆ ರಾಜ್ಯ ಪ್ರಶಸ್ತಿಗಳನ್ನು ನೀಡಲು ಮತ್ತು ರಫ್ತು ಉತ್ತೇಜನ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗಿದೆ. ಬಿದರಿ ಕುಶಲಕರ್ಮಿಗಳಿಗೆ ಕಚ್ಚಾ ಮಾಲುಗಳಾದ ಬೆಳ್ಳಿ ಮತ್ತು ಜಿಂಕ್‌ವನ್ನು ಶೇ.50ರಷ್ಟು ಸಬ್ಸಿಡಿ ದರದಲ್ಲಿ 250 ಕುಶಲಕರ್ಮಿಗಳಿಗೆ ಸರಬರಾಜು ಮಾಡಲು ರೂ.10.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಸಾಗರದಲ್ಲಿರುವ ನಿಗಮದ ಸಂಕೀರ್ಣದಲ್ಲಿ ವಿನ್ಯಾಸ ಅಭಿವೃದ್ಧಿ ಘಟಕವನ್ನು ಸ್ಥಾಪನೆ ಮಾಡಲು ರೂ.3.20 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಇದರಿಂದ 1000 ಕುಶಲಕರ್ಮಿಗಳಿಗೆ ಪ್ರಯೋಜನ ಒದಗಿಸಲಾಗಿದೆ.

**ಬಿ) ಅರ್ಬನ್ ಹಾತ್ :**

ಅರ್ಬನ್ ಹಾತ್ ಯೋಜನೆಯನ್ನು ಕೇಂದ್ರ ಸರ್ಕಾರವು ರೂಪಿಸಿದೆ. ಈ ಹಾತ್‌ಗಳನ್ನು ರಾಜ್ಯದ ಮುಖ್ಯ ಸ್ಥಳಗಳಲ್ಲಿ ಸ್ಥಾಪಿಸಿ ಕುಶಲ ಕರ್ಮಿಗಳು ಅವರ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಅನುವಾಗುವಂತೆ ಯೋಜನೆಯು ವಿಕಾಸಗೊಂಡಿದೆ. ಕುಶಲಕರ್ಮಿಗಳ ಸಂಕೀರ್ಣದಲ್ಲಿ ಮತ್ತು ವಸ್ತು ಪ್ರದರ್ಶನ ಭವನದಲ್ಲಿ 40 ರಿಂದ 50 ಮಳಿಗೆಗಳು ಇರುವಂತೆ ಯೋಜಿಸಿ ಕುಶಲ ಕರ್ಮಿಗಳ ಅವಶ್ಯಕತೆಗೆ ಅನುಗುಣವಾಗಿ ವಾರದ ವಸ್ತು ಪ್ರದರ್ಶನ ವ್ಯವಸ್ಥೆಯಲ್ಲಿ ಅವರ ಉತ್ಪನ್ನಗಳನ್ನು ಮಾರಾಟ ಮಾಡಬಹುದು. ಈ ಯೋಜನೆಗೆ ಕೇಂದ್ರ ಸರ್ಕಾರದ ಜವಳಿ ಸಚಿವಾಲಯವು ಗರಿಷ್ಠ ರೂ. 210 ಲಕ್ಷಗಳು ಅಥವಾ ಶೇಕಡ 70 ರಷ್ಟು ಯೋಜನಾ ವೆಚ್ಚವನ್ನು ನೀಡುತ್ತದೆ. ಉಳಿದ ಶೇ.30 ಯೋಜನಾವೆಚ್ಚ ಅಥವಾ ಗರಿಷ್ಠ ರೂ. 90.00 ಲಕ್ಷದಷ್ಟನ್ನು ರಾಜ್ಯ ಸರ್ಕಾರ ಮತ್ತು ಅನುಷ್ಠಾನಗೊಳಿಸುವ ಸಂಸ್ಥೆಗಳು ಭರಿಸುತ್ತವೆ.

ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮಕ್ಕೆ ಫ್ರೀಡಮ್ ಪಾರ್ಕ್, ಬೆಂಗಳೂರಿನಲ್ಲಿ ಅರ್ಬನ್ ಹಾಥ್ ಸ್ಥಾಪಿಸಲು ಪ್ರಾರಂಭಿಕ ವೆಚ್ಚಗಳಿಗಾಗಿ ರೂ.10.00 ಲಕ್ಷಗಳನ್ನು ಬಿಡುಗಡೆಗೊಳಿಸಿದೆ.

## ಸಿ) ಖಾದಿ ಗ್ರಾಮೋದ್ಯೋಗ ಮಂಡಳಿ:

ಖಾದಿ ಬೋರ್ಡ್‌ನ ಮುಖ್ಯ ಉದ್ದೇಶವು ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಪಡಿಸಿ ಖಾದಿ ವಲಯಗಳನ್ನು ನಿಯಂತ್ರಿಸಿ ಗುಡಿ ಕೈಗಾರಿಕೆಗಳಿಗೆ ಸಹಾಯವನ್ನು ಒದಗಿಸುವುದರ ಮುಖಾಂತರ ಗ್ರಾಮೀಣ ಪ್ರದೇಶದಲ್ಲಿರುವ ಕುಶಲ ಕರ್ಮಿಗಳಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದಲ್ಲದೆ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಾಗಿರುತ್ತದೆ.

ಸಂಸ್ಥೆಯ ಮುಖ್ಯ ಚಟುವಟಿಕೆಗಳು ಈ ಕೆಳಗಿನಂತಿವೆ:

1) ಗ್ರಾಮೀಣ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮ (ಬೀಜಧನ ಯೋಜನೆ)
2) ಉತ್ಪನ್ನ ಅಭಿವೃದ್ಧಿ ವಿನ್ಯಾಸ ಹಾಗೂ ಪ್ಯಾಕೇಜಿಂಗ್
3) ಖಾದಿ ಅಭಿವೃದ್ಧಿ (ರಿಯಾಯಿತಿ ಮತ್ತು ಪ್ರೋತ್ಸಾಹ)
4) ಕೈಗಾರಿಕಾ ವಿಕಾಸ
5) ಖಾದಿ ಉತ್ಪನ್ನಗಳ ಚಿಲ್ಲರೆ ಮಾರಾಟದ ಮೇಲೆ ರಿಯಾಯಿತಿ
6) ಜೇನುಕೃಷಿ

## ಖಾದಿ ಉತ್ಪನ್ನಗಳ ಚಿಲ್ಲರೆ ಮಾರಾಟದ ಮೇಲೆ ರಿಯಾಯಿತಿ:

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಖಾದಿ ಬಟ್ಟೆಗಳ ಚಿಲ್ಲರೆ ಮಾರಾಟದ ಮೇಲೆ ರಿಯಾಯಿತಿಯನ್ನು ನೀಡುತ್ತಾ ಬಂದಿದೆ. ಹೀಗೆ ರಿಯಾಯಿತಿಯನ್ನು ನೀಡುವುದರ ಮೂಲಕ ಖಾದಿಯ ಉತ್ಪಾದನೆ ಮಾರಾಟ ಹಾಗೂ ಈ ರಂಗದಲ್ಲಿ ಉದ್ಯೋಗ ಸೃಷ್ಟಿಗೆ ಒತ್ತಾಸೆ ನೀಡುತ್ತಿದೆ. ವರ್ಷವಿಡಿ ಮಾರಾಟವಾಗುವ ಖಾದಿ ಉತ್ಪನ್ನದ ಮೇಲೆ ರಾಜ್ಯ ಸರ್ಕಾರವು ಶೇಕಡ 5 ರಂತೆ ಹಾಗೂ ಕೇಂದ್ರ ಸರ್ಕಾರವು ಶೇಕಡ 10 ರಂತೆ ರಿಯಾಯಿತಿಯನ್ನು ನೀಡುವುದಲ್ಲದೆ, 108 ವಿಶೇಷ ದಿನಗಳಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ತಲಾ ಶೇಕಡ 10 ರಂತೆ ಹೆಚ್ಚುವರಿ ರಿಯಾಯತಿ ನೀಡಲಾಗುವುದು.

2009-10ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ರಾಜ್ಯ ಸರ್ಕಾರವು 500 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

## ಡಿ) ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ :

ಈ ನಿಗಮವು ರಾಜ್ಯದಲ್ಲಿ ನಾರಿನ ವಲಯವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದೆ. ನಿಗಮದ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿವೆ.

1) ರಾಜ್ಯದಲ್ಲಿ ನಾರಿನ ಕೈಗಾರಿಕಾ ಆಬಿವೃದ್ಧಿ.
2) ತೆಂಗಿನ ನಾರಿನ ಉತ್ಪನ್ನಗಳ ಹಾಗೂ ತೆಂಗಿನ ನಾರಿನ ಉತ್ಪದನಾ ಮಾರಾಟಕ್ಕೆ ಉತ್ತೇಜನ
3) ನಾರು ವಲಯದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನ.

4) ಗ್ರಾಮೀಣ ಮಹಿಳೆಯರಿಗೆ(ಪ.ಜಾ/ಪ.ಪಂ ದವರು ಒಳಗೊಂಡಂತೆ) ತೆಂಗಿನ ನಾರಿನ ಉತ್ಪನ್ನಗಳಲ್ಲಿ ತರಬೇತಿ ಹಾಗೂ ತರಬೇತಿಯ ನಂತರ ಅವರನ್ನು ಉತ್ಪಾದನೆಯಲ್ಲಿ ಉದ್ಯೋಗ ನಿರತರಾಗಿ ಮಾಡುವುದು.

5) ತೆಂಗಿನ ನಾರಿನ ಉತ್ಪನ್ನಗಳ ಸಂಶೋಧನೆ ಹಾಗೂ ಅಭಿವೃದ್ಧಿ

**2009-10 ಸಾಲಿನ ಗುರಿ ಮತ್ತು ಸಾಧನೆ :**

| ಕ್ರಮ ಸಂಖ್ಯೆ | ವಿವರ | ಗುರಿ (ರೂ.ಲಕ್ಷಗಳಲ್ಲಿ) | ಸಾಧನೆ (ರೂ.ಲಕ್ಷಗಳಲ್ಲಿ) | % |
|---|---|---|---|---|
| 1 | ಮಾರಾಟ | 316.60 | 237.23 | 75.65 |
| 2 | ಉತ್ಪಾದನೆ | 250.00 | 174.11 | 69.65 |
| 3 | ಉದ್ಯೋಗ | 1100 | | |

ಪವರ್‌ಲೂಮ್ ಮ್ಯಾಟಿಂಗ್ ತಯಾರಿಕೆಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು, ಈಗಿರುವ ಉತ್ಪಾದನಾ ಕೇಂದ್ರಗಳ ದುರಸ್ತಿ ಮತ್ತು ನಿರ್ವಹಣೆ ಮಾಡಲು ರೂ. 50.00 ಲಕ್ಷ ಮತ್ತು ಹಿಂದಿನ ಸಾಲಗಳ ಮೇಲೆ ನಾರಿನ ರಿಬೇಟ್ ನೀಡಲು ರೂ. 37.50 ಲಕ್ಷಗಳನ್ನು ಹಾಗೂ ಅಭಿವೃದ್ಧಿ ಸಹಾಯ ಯೋಜನೆಯಡಿ ರೂ. 31.84 ಲಕ್ಷ ಮೊತ್ತವನ್ನೂ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ.

## ಇ) ಕರ್ನಾಟಕ ರಾಜ್ಯ ನಾರು ಸಹಕಾರ ಫೆಡರೇಷನ್ ನಿಯಮಿತ :

ಸಹಕಾರ ಸಂಘಗಳ ಮುಖಾಂತರ ನಾರು ವಲಯವನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಮೇಲ್ಕಂಡ ಸಂಸ್ಥೆಯು 1961ರಲ್ಲಿ ಸ್ಥಾಪಿತವಾಯಿತು. ಇದರ ಮುಖ್ಯ ಉದ್ದೇಶವು ಪ್ರಾಥಮಿಕ ಸಹಕಾರ ಸಂಘಗಳಿಗೆ ಬೆಂಬಲ, ಸಹಾಯ ನೀಡುವುದು, ತರಬೇತಿ ಒದಗಿಸುವುದು, ನಾರು ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದು ತಾಂತ್ರಿಕ ಮಾರ್ಗದರ್ಶನ ನೀಡಿ ಸರ್ಕಾರದ ಐಸಿಡಿಪಿ ಮತ್ತಿತರ ಯೋಜನೆಗಳನ್ನು ಅನುಷ್ಠಾನಗೊಳಿಸುವುದಾಗಿರುತ್ತದೆ. ಈ ಸಂಸ್ಥೆಯು 17 ಮಾರುಕಟ್ಟೆ ಮಳಿಗೆಗಳನ್ನು ಹಾಗೂ 20 ಉತ್ಪಾದನಾ ಘಟಕಗಳನ್ನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಹೊಂದಿದೆ. ಈ ಫೆಡರೇಷನ್ 1200 ಗ್ರಾಮೀಣ ಜನರಿಗೆ ಉದ್ಯೋಗವನ್ನು ಒದಗಿಸಿದೆ ಅದರಲ್ಲಿ ಶೇಕಡ 90 ರಷ್ಟು ಮಹಿಳೆಯರಾಗಿದ್ದಾರೆ. ಈ ಫೆಡರೇಷನ್‌ಗೆ 52 ನಾರು ಪ್ರಾಥಮಿಕ ಸಹಕಾರ ಸಂಘಗಳು ಸೇರಿಕೊಂಡಿವೆ. ಈ ಸಂಸ್ಥೆಯು ತೆಂಗಿನ ನಾರು, ತೆಂಗಿನ ನಾರಿನ ಚಾಪೆ, ಜಿಯೋ ಟೆಕ್ಸ್‌ಟೈಲ್ಸ್ ಮುಂತಾದ ಉತ್ಪನ್ನಗಳನ್ನು ಉತ್ಪಾದಿಸುತ್ತದೆ.

**2009-10 ನೇ ಸಾಲಿನ ಗುರಿ ಮತ್ತು ಸಾಧನೆ**

| ಕ್ರಮ ಸಂಖ್ಯೆ | ವಿವರ | ಗುರಿ (ರೂ.ಲಕ್ಷಗಳಲ್ಲಿ) | ಸಾಧನೆ (ರೂ.ಲಕ್ಷಗಳಲ್ಲಿ) | % |
|---|---|---|---|---|
| 1 | ಮಾರಾಟ | 600.00 | 265.00 | 44 |
| 2 | ಉತ್ಪಾದನೆ | 250.00 | 125.00 | 50 |
| 3 | ಉದ್ಯೋಗ | 392 | | |

ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು, ಈಗಿರುವ ಉತ್ಪಾದನಾ ಕೇಂದ್ರಗಳ ದುರಸ್ತಿ ಮತ್ತು ನಿರ್ವಹಣೆ ಮಾಡಲು ಹೊಸ ಯಂತ್ರೋಪಕರಣಗಳ ಖರೀದಿಗಾಗಿ ಮತ್ತು ಪೂರಕ ಸೌಲಭ್ಯಗಳ ಅಭಿವೃದ್ಧಿಗಾಗಿ ರೂ. 50 ಲಕ್ಷಗಳನ್ನು ಹಾಗೂ ಮಾರುಕಟ್ಟೆ ಅಭಿವೃದ್ಧಿ ಸಹಾಯ ಯೋಜನೆಯಡಿ ರೂ. 18.76 ಲಕ್ಷ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

## ಎಫ್) ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಆಬಿವೃದ್ಧಿ ನಿಗಮ ನಿಯಮಿತ: (ಲಿಡಕರ್)

ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ದಿ ನಿಗಮ ನಿಯಮಿತ (ಲಿಡ್‌ಕರ್) ಸಂಸ್ದೆಯನ್ನು ಕರ್ನಾಟಕ ಸರ್ಕಾರವು 1976ರಲ್ಲಿ ಸ್ಥಾಪಿಸಿದ್ದು, ರಾಜ್ಯದಲ್ಲಿನ ಚರ್ಮೋದ್ಯಮದ ಬೆಳವಣಿಗೆ ಮತ್ತು ಪರಿಶಿಷ್ಠ ಜಾತಿಯ ಚರ್ಮ ಕುಶಲಕರ್ಮಿಗಳ ಆರ್ಥಿಕ ಮತ್ತು ಸಾಮಾಜಿಕ ಶ್ರೇಯೋಭಿವೃದ್ದಿಯು ಸಂಸ್ಥೆಯ ಮೂಲ ಉದ್ದೇಶಗಳಾಗಿರುತ್ತವೆ. ನಿಗಮದ ಹೆಸರನ್ನು ಡಾ: ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ದಿ ನಿಗಮ ನಿಯಮಿತ ಎಂದು 2009-10ನೇ ಸಾಲಿನಲ್ಲಿ ಬದಲಾವಣೆ ಮಾಡಲಾಗಿದೆ. ನಿಗಮವು ಹಲವಾರು ಅಭಿವೃದ್ದಿ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ನಿಗಮವು 25,000 ಕ್ಕೂ ಹೆಚ್ಚಿನ ಚರ್ಮ ಕುಶಲ ಕರ್ಮಿಗಳಿಗೆ ವಸತಿ ಕಾರ್ಯಗಾರಗಳು ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ನಿರ್ಮಿಸುವುದರೊಂದಿಗೆ ತರಬೇತಿ ಕಾರ್ಯಕ್ರಮಗಳು ಹಾಗೂ ವೇ ಸೈಡ್ ಕ್ಯಾಬಿನ್‌ಗಳ ವಿತರಣೆ ಮೂಲಕ ಸಹಾಯ ಕಲ್ಪಿಸಿದೆ.

## ಡಾ: ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ದಿ ನಿಗಮ ನಿಯಮಿತದ ಪುನ:ಶ್ಚೇತನ

21 ಕೇಂದ್ರಗಳಲ್ಲಿ 600 ಚರ್ಮ ಕುಶಲಕರ್ಮಿ ಕುಟುಂಬಗಳನ್ನು ಗುರುತಿಸಿದ್ದು, ಅವರಲ್ಲಿ 400 ಕುಟುಂಬಗಳಿಗೆ ಸುಮಾರು ರೂ.130 ಲಕ್ಷಗಳಷ್ಟು ಚರ್ಮದ ಉತ್ಪನ್ನಗಳನ್ನು ಖರೀದಿಸಲು ಆದೇಶಗಳನ್ನು ನೀಡಲಾಗಿದೆ. ಇವರಲ್ಲಿ 209 ಕುಶಲಕರ್ಮಿಗಳು ನಿಗಮದ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದು, ಇವರಿಂದ ರೂ. 40 ಲಕ್ಷಗಳ ಬೆಲೆಯ ಉತ್ಪನ್ನಗಳನ್ನು ಸಂಗ್ರಹಿಸಿ ಎಲ್ಲಾ ಮಾರಾಟ ಮಳಿಗೆಗಳಿಗೆ ವಿತರಿಸಲಾಗಿದೆ. ಇದಲ್ಲದೆ ಜಾಹಿರಾತು ಮತ್ತು ಪ್ರಚಾರ, ರಿಯಾಯಿತಿ, ವಸ್ತುಪ್ರದರ್ಶನ ಮತ್ತು ಮಾರಾಟ ಹಾಗೂ ಸಂಬಂದಿತ ಕೆಲಸಗಳಿಗೆ ರೂ. 27 ಲಕ್ಷ ಖರ್ಚು ಮಾಡಲಾಗಿದೆ.

400 ಕುಶಲಕರ್ಮಿ ಕುಟುಂಬಗಳನ್ನು ಮಾರುಕಟ್ಟೆ ಸಹಾಯ ಯೋಜನೆಯಡಿಯಲ್ಲಿ ಅಳವಡಿಸಲಾಗಿದೆ. ಈ ಯೋಜನೆಯಡಿಯಲ್ಲಿ ಒಟ್ಟು ಬೆಲೆಯ ಶೇ. 50 ರಷ್ಟು ಕಚ್ಚಾಮಾಲಿನ ವೆಚ್ಚವಾಗಿ ಕೂಡಲೆ ಬಿಡುಗಡೆ ಮಾಡಲಾಗುವುದು. ಒಟ್ಟು ಸಂಗ್ರಹಣೆ ಮಾಡಿರುವ ರೂ.40 ಲಕ್ಷಗಳಷ್ಟು ಉತ್ಪನ್ನಗಳ ಬೆಲೆಯಲ್ಲಿ ಶೇ. 50 ರಷ್ಟು ಈಗಾಗಲೇ ಪಾವತಿ ಮಾಡಲಾಗಿದೆ.

ತುಮಕೂರು, ಧಾರವಾಡ, ಚಿಕ್ಕಮಗಳೂರು ಮತ್ತು ಬೆಂಗಳೂರಿನ ವಿಜಯನಗರದಲ್ಲಿ ಹೊಸ ಮಾರಾಟ ಮಳಿಗೆಗಳನ್ನು ತೆರೆಯಲಾಗಿದ್ದು, ಈ ಯೋಜನೆಗೆ ರೂ. 25 ಲಕ್ಷ ವೆಚ್ಚ ಮಾಡಲಾಗಿದೆ.

ಹೊಸಪೇಟೆ, ಮೈಸೂರು – 1 & 2, ಬೆಂಗಳೂರಿನ ಮೆಜಸ್ಟಿಕ್ ಮತ್ತು ರಾಜಾಜಿನಗರ, ಮಂಗಳೂರು ಹಾಗೂ ನಿಗಮದ ಪ್ರಧಾನ ಕಛೇರಿಗಳಲ್ಲಿ ನವೀಕರಣ ಮತ್ತು ಗಣಕೀಕರಣ ಕಾರ್ಯ ಪೂರ್ಣಗೊಂಡಿದ್ದು, ಈ ಕಾರ್ಯಕ್ಕಾಗಿ ರೂ.25 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

